


ಸಂಪುಟ 1– ಸಂಚಿಕೆ 3 ದ್ವೈಮಾಸಿಕ ವಿದ್ಯುನ್ಮಾನ ಪತ್ರಿಕೆ ದಿನಾಂಕ: ಜುಲೈ, 2010

## ಗೌರವ ಸಂಪಾದಕರಿಂದ

**‘ಬಾಲವಾಣಿ’**ಯ ಮೂರನೆ ಸಂಚಿಕೆಯನ್ನು ಬಿಡುಗಡೆಗೊಳಿಸಲು ಹರ್ಷಿಸುತ್ತಿದ್ದೇವೆ. ದೇಶದ ಹಾಗೂ ಪ್ರಪಂಚದಲ್ಲಿನ ಮಕ್ಕಳ ಕಲ್ಯಾಣ ಹಾಗೂ ಬಾಲಕಾರ್ಮಿಕತೆಯ ಇತ್ತೀಚಿನ ಆಗುಹೋಗುಗಳು ಹಾಗೂ ಬೆಳವಣಿಗೆಗಳನ್ನು ನಮ್ಮ ಓದುಗರಿಗೆ ತಿಳಿಸುವ ಪತ್ರಿಕೆಯ ಮುಖ್ಯ ಉದ್ದೇಶ, ಈ ಸಂಚಿಕೆಯಿಂದ ಇನ್ನಷ್ಟು ಅರ್ಥಪೂರ್ಣವಾಗಲಿದೆ. **‘ಬಾಲವಾಣಿ’**ಯಲ್ಲಿ ಮೂಡಿ ಬಂದಿರುವ ಬಾಲಕಾರ್ಮಿಕತೆ ಬಗೆಗಿನ ಬರವಣಿಗೆಗಳು, ಪತ್ರಿಕೆಯ ಉದ್ದೇಶಕ್ಕೆ ಪೂರಕವಾಗಿದೆ, ಹಾಗೂ ಜೂನ್ 12ರಂದು ನಡೆಯಲಿರುವ ‘ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ’ಗೆ ಅನುಗುಣವಾಗಿದೆ. ಅಭಿವೃದ್ಧಿಗಾಗಿ ದುಡಿಯುತ್ತಿರುವ ಎಲ್ಲ ಸಂಸ್ಥೆಗಳು, ವ್ಯಕ್ತಿಗಳು ಹಾಗೂ ಎಲ್ಲ ವರ್ಗದ ಜನರು **‘ಬಾಲವಾಣಿ’**ಯ ಪ್ರಯತ್ನದಲ್ಲಿ ಭಾಗಿಯಾಗುತ್ತೀರಿ ಎಂದು ನಂಬುತ್ತೇನೆ. ಆಗ ಮಾತ್ರ ನಮ್ಮ ಉದ್ದೇಶಗಳು ಪರಿಪೂರ್ಣಗೊಳ್ಳಲು ಸಾಧ್ಯ.



ಗೌರವ ಸಂಪಾದಕರು,
**ಎಂ.ಎಸ್. ರವಿಶಂಕರ್, ಐಎಎಸ್**
ಕಾರ್ಮಿಕ ಆಯುಕ್ತರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ,
ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರ, ಕರ್ನಾಟಕ ಸರ್ಕಾರ.

## ಒಳನೋಟ


| | |
|---|---|
| ಮಕ್ಕಳ ಜೀವನ ‘ಚಿಂದಿ’, ಬೇಕಿದೆ ಶಿಕ್ಷಣದ ‘ನಾಂದಿ’? | 3 |
| 5 ಪ್ರಶ್ನೆ-ಭಿನ್ನ ಉತ್ತರ | 7 |
| ಬಾಲಬಂಧು | 9 |
| ಕೆಲವರ ಬಾಲ್ಯವೇಕೆ ಹೀಗೆ? | 11 |
| ಮಾಧ್ಯಮ ನೋಟ | 12 |
| ಸೌಲಭ್ಯವಂಚಿತ ಮಕ್ಕಳಿಗಾಗಿ ಗೋಲ್ಡನ್ ಸ್ಟಾರ್ | 13 |
| ಪುಸ್ತಕ ವಿಮರ್ಶೆ | 16 |


## ಸಂಪಾದಕರ ಲೇಖನಿಯಿಂದ

ಆತ್ಮೀಯ ಓದುಗರೆ,



ಮತ್ತೊಂದು ‘ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ’ಯನ್ನು, (ಜೂನ್ 12)ರಂದು ನಾವೆಲ್ಲಾ ಸಾಕ್ಷೀಕರಿಸಲಿದ್ದೇವೆ. ಈ ಇಡೀ ವಿಶ್ವವೇ ಕಾಲನಿಗೆ ಪೈಪೋಟಿ ಎನ್ನುವ ಹಾಗೆ ಗಡಿಯಾರಕ್ಕಿನ್ನೊಂದಿಷ್ಟು ಅಂಕಿಗಳಿದ್ದರೆ ಚೆಂದಿತ್ತೇನೋ ಎಂಬ ಚಿಂತೆಯಲ್ಲಿ ಮಿಂದು, ‘ಆರ್ಥಿಕ–ವೈಜ್ಞಾನಿಕ’ ಮುನ್ನಡೆಗಾಗಿ ನಾಗಾಲೋಟದಿಂದ ಚಲಿಸುತ್ತಿದೆ. ಆದರೆ ಅದೇಕೋ ಈ ವೇಗ ‘ಮಕ್ಕಳ ಕಲ್ಯಾಣ’ದ ವಿಷಯದಲ್ಲಿ ಆಮೆಗತಿಗೆ ಪೈಪೋಟಿ ನೀಡುತ್ತಿದೆ. ಇತ್ತೀಚೆಗೆ ‘ಹೇಗ್’ನಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಸಮ್ಮೇಳನದ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಹೊರ ತಂದಿರುವ ‘ವಿಶ್ವ ಬಾಲಕಾರ್ಮಿಕ ವರದಿ’ ಚಿಂತೆಗೀಡು ಮಾಡುವಂತಿದೆ. 2004ರಿಂದ 2008ರವರೆಗೆ ಬಾಲಕಾರ್ಮಿಕ ನಿರ್ಮೂಲನೆಯಲ್ಲಿ ನಾವು ಸಾಧಿಸಿರುವ ಪ್ರಗತಿ ಕೇವಲ 03%. ಏಷಿಯಾ–ಪೆಸಿಫಿಕ್ ಭಾಗದಲ್ಲಿ ವಿಶ್ವದಲ್ಲೇ ಹೆಚ್ಚಿನ ಸಂಖ್ಯೆಯ ಮಕ್ಕಳು ದುಡಿಯುತ್ತಿರುವುದು ವಿಷಾದನೀಯ. 2016ಕ್ಕೆ ಬಾಲಕಾರ್ಮಿಕತೆಯ ನಿರ್ಮೂಲನೆಗಾಗಿನ ಅಂತಾರಾಷ್ಟ್ರೀಯ ಗುರಿ ಬರೀ ಮರೀಚಿಕೆಯಷ್ಟೇ ಅನ್ನೋಣವೇ? ನಾವೆಲ್ಲಾ ಚಿಂತಿಸಬೇಕಿದೆ, ಚರ್ಚಿಸಬೇಕಿದೆ, ಹಾಗೆಯೇ ಶ್ರಮಿಸಬೇಕಿದೆ. ನಮ್ಮಲ್ಲಿ ಬಹಳಷ್ಟು ಮಂದಿ ತಿಳಿದಂತೆ, **‘ಚಿಂದಿ ಆಯುವ’** ಕೆಲಸ ಬೀದಿ ಬದಿಯ ಮಕ್ಕಳ ಅಸಂಘಟಿತ ಕೆಲಸವಾಗಿಲ್ಲದೇ ಸಂಘಟಿತ ‘ದಂಧೆ’ಯಾಗಿ ವ್ಯಾಪಿಸುತ್ತಿದೆ. ಅದರತ್ತ ನಮ್ಮ ಓದುಗರ ಚಿತ್ತ ಸೆಳೆಯಲು ಈ ಬಾರಿಯ ‘ಬಾಲವಾಣಿ’ ಪ್ರಯತ್ನಿಸುತ್ತಿದೆ. ಮರಳುಗಾಡಿನಲ್ಲಿನ ‘ಓಯಸಿಸ್’ ಹಾಗೆ, ಎಲ್ಲಾ ಸಮಸ್ಯೆಗಳ ನಡುವೆ ಕೆಲವು ಸಂಸ್ಥೆಗಳು ದುಡಿಮೆಯಲ್ಲಿ ಸಿಲುಕಿರುವ ಮಕ್ಕಳ ಬದುಕಿಗೆ ಶಿಕ್ಷಣವೆಂಬ ಭರವಸೆಯ ಬುನಾದಿ ಹಾಕುವಲ್ಲಿ ಅವಿರತವಾಗಿ ಶ್ರಮಿಸುತ್ತಿವೆ. ಎಸ್‌ಎಸ್‌ಎಲ್‌ಸಿ–ಪಿಯುಸಿ ಫಲಿತಾಂಶ ಪ್ರಕಟವಾಗಿರುವ ಈ ಸಂದರ್ಭದಲ್ಲಿ ‘ಬಾಲವಾಣಿ’ಗೆ ಇಂತಹ ಅನೇಕ ಸಂತಸದ ‘ಯಶೋಗಾಥೆ’ಗಳು ಕೇಳಿ ಬರುತ್ತಿವೆ. ಅದರ ತರಂಗಗಳನ್ನು ನಾವು ನಿಮಗೆ ತೇಲಿ ಬಿಡುತ್ತಿದ್ದೇವೆ. ಉಳಿದಂತೆ ಕಳೆದ ಎರಡು ಸಂಚಿಕೆಗಳ ನಮ್ಮ ಪ್ರಯತ್ನಕ್ಕೆ ಉತ್ತಮ ಪ್ರತಿಕ್ರಿಯೆ ಲಭಿಸಿದೆ. ‘ಬಾಲವಾಣಿ’ಯ ಸಂಪಾದಕೀಯ ತಂಡ ತನ್ನ ಕೃತಜ್ಞತೆಗಳನ್ನು ತನ್ನೆಲ್ಲಾ ಶ್ರೇಯೋಭಿಲಾಷಿಗಳಿಗೆ ಅರ್ಪಿಸುತ್ತಿದೆ.



ಪ್ರಧಾನ ಸಂಪಾದಕರು,
**ಆರ್. ಬಸವರಾಜು**



ಗುರಿಯತ್ತ ಸಾಗೋಣ:
ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸೋಣ
12 ಜೂನ್ 2010
ವಿಶ್ವ ಬಾಲಕಾರ್ಮಿಕ ಪದ್ಧತಿ
ವಿರೋಧಿ ದಿನ
Decent Work
A better world Starts here.
ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರ
ksrccl@yahoo.in

# ಮಕ್ಕಳ ಜೀವನ 'ಚಿಂದಿ', ಬೇಕಿದೆ ಶಿಕ್ಷಣದ 'ನಾಂದಿ'

ಕಳೆದ ಏಪ್ರಿಲ್ ತಿಂಗಳ ಸುಡು ಬಿಸಿಲಿನ ಸಮಯ. ಬೆಂಗಳೂರಿನ ಪಂತರಪಾಳ್ಯದ ಕೊಳಚೆ ಪ್ರದೇಶದಲ್ಲಿರುವ ಪ್ಲಾಸ್ಟಿಕ್ ಪುನರುತ್ಪತ್ತಿ ಘಟಕವೊಂದರ ಹಿತ್ತಲಿನಲ್ಲಿ, 10–15 ವರ್ಷ ವಯಸ್ಸಿನ ಸುಮಾರು 50 ಬಾಲಕರು, ನಗರದ ಹಲವು ಬಡಾವಣೆಗಳಿಂದ ಸಂಗ್ರಹಿಸಿ ತಂದಿದ್ದ ವೇಸ್ಟ್ ಪ್ಲಾಸ್ಟಿಕ್ ಮತ್ತಿತರ ಕಸವನ್ನು ಬೇರ್ಪಡಿಸುವ ಕೆಲಸದಲ್ಲಿ ತಲ್ಲೀನರಾಗಿದ್ದರು. ಇದ್ದಕ್ಕಿದ್ದಂತೆ ಆಗಮಿಸಿದ 'ಸಂರಕ್ಷಣಾ ತಂಡ'ವೊಂದು ಇವರನ್ನು ಮಾತನಾಡಿಸಲು ಬಂದಾಗ ದಿಗಿಲುಗೊಂಡು ಓಡತೊಗಿದರು. 'ಸಂರಕ್ಷಣಾ ತಂಡ' ಸುಮಾರು 35 ಜನ ಬಾಲಕರನ್ನು ತಡೆಯುವಲ್ಲಿ ಸಫಲವಾಯಿತು. ನಂತರ ಈ ಎಲ್ಲ ಬಾಲಕರನ್ನು ತಾವು ತೊಡಗಿದ್ದ ಅಪಾಯಕಾರಿ ಕೆಲಸದಿಂದ ಮುಕ್ತಿಗೊಳಿಸಿ ಕರೆದೊಯ್ಯಲಾಯಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಹಲವು ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರ ಸಹಯೋಗದಲ್ಲಿ, ಪೊಲೀಸ್ ಸಹಾಯ–ದೊಂದಿಗೆ ನಡೆಸಲಾದ ದಾಳಿಯಲ್ಲಿ ನಗರದ ನಾಯಂಡಹಳ್ಳಿಯಲ್ಲಿರುವ ಪಂತರಪಾಳ್ಯದ ಘಟಕದಲ್ಲಿ ಕಾರ್ಯನಿರತರಾಗಿದ್ದ ಹಲವು ಬಾಲಕಾರ್ಮಿಕರನ್ನು ಪಾರುಮಾಡುವಲ್ಲಿ ಅಧಿಕಾರಿಗಳ ತಂಡ ಯಶಸ್ವಿಯಾಯಿತು. ಈ ಬಾಲಕರೆಲ್ಲರೂ, 'ಚಿಂದಿ ಆಯುವ ಕೆಲಸದವರು'.

ದೊಡ್ಡ ದೊಡ್ಡ ಪಟ್ಟಣ ಹಾಗೂ ನಗರಗಳ ಬಡಾವಣೆಗಳಲ್ಲಿ 'ಚಿಂದಿ ಆಯುವ' ಮಕ್ಕಳನ್ನು ಪ್ರತಿಯೊಂದು ರಸ್ತೆಯ ಮೂಲೆಯಲ್ಲೂ ನಾವು ಕಾಣಬಹುದು. ರಸ್ತೆ ಬದಿಯಲ್ಲಿ ಬಿಸಾಡಲಾಗಿರುವ ಕಸದಲ್ಲಿ ಪ್ಲಾಸ್ಟಿಕ್ ಕಪ್‌ಗಳು, ಕವರ್‌ಗಳು, ಔಷಧಿ ಹಾಗೂ ಇತರೆ ಬಾಟಲ್‌ಗಳು, ಪೇಪರ್, ಇತ್ಯಾದಿಯನ್ನು ಈ ಮಕ್ಕಳು ಆಯುವಲ್ಲಿ ತೊಡಗಿರುತ್ತಾರೆ. ಸಾಮಾನ್ಯವಾಗಿ 'ಚಿಂದಿ ಆಯುವುದು' ಅತ್ಯಂತ ನಿಕೃಷ್ಟ ಹಾಗೂ ಕಂಟಕಮಯವಾದ ಕೆಲಸವೆಂದು ಪರಿಗಣಿಸಲಾಗುತ್ತದೆ. ಇಂತಹ ಕೆಲಸಗಳಲ್ಲಿ ತೊಡಗುವ ಬಹುಪಾಲು ಮಕ್ಕಳು ಕಡು ಬಡತನದಲ್ಲಿರುವ ಅಥವಾ ಬೇರೆ ಆಯ್ಕೆಯಿಲ್ಲದೆ ಜೀವನ ನಡೆಸಲು ಅನಿವಾರ್ಯವಾಗಿ ಬಂದವರಾಗಿರುತ್ತಾರೆ. ಈ ಕೆಲಸದಲ್ಲಿ ತೊಡಗಿರುವವರು ಸಂಪೂರ್ಣ ಅನಕ್ಷರಸ್ಥರಾಗಿರುವ ಕಾರಣ, ಇದರ ದುಷ್ಪರಿ–ಣಾಮಗಳನ್ನು ಅರಿಯದವರಾಗಿರುತ್ತಾರೆ. ಚಿಂದಿ ಆಯುವ ಮಕ್ಕಳು ತಾವು ಸಂಗ್ರಹಿಸಿದ ಕಸದಲ್ಲಿ ಪ್ಲಾಸ್ಟಿಕ್, ಪೇಪರ್, ಬಾಟಲ್, ಇತ್ಯಾದಿಗಳನ್ನು ಬೇರ್ಪಡಿಸಿ ಅಂಗಡಿಗಳಿಗೆ ಮಾರುತ್ತಾರೆ. ಇದನ್ನು ಅಂಗಡಿಯವರು ಪುನರುತ್ಪಾದಿಸುವ ಘಟಕಗಳಿಗೆ ಕಚ್ಚಾ ಸಾಮಾಗ್ರಿಯಾಗಿ ಮಾರುತ್ತಾರೆ.




**ಬೆಂಗಳೂರಿನ ಪಂತರಪಾಳ್ಯದಲ್ಲಿರುವ ಪ್ಲಾಸ್ಟಿಕ್ ಪುನರುತ್ಪಾದಿಸುವ ಘಟಕವೊಂದರ ಬಳಿ ಶೇಖರಿಸಲಾದ ಕಸವನ್ನು ಬೇರ್ಪಡಿಸುತ್ತಿರುವ ಮಕ್ಕಳು.** ಚಿತ್ರ: ಜಸ್ಟೀಸ್ ಅಂಡ್ ಕೇರ್.

"ಹೆಚ್ಚು, ಹೆಚ್ಚು ಮಹಿಳೆಯರು ಹಾಗೂ ಮಕ್ಕಳು 'ಚಿಂದಿ ಆಯುವ' ಕೆಲಸದಲ್ಲಿ ತೊಡಗುತ್ತಿರುವುದು ಗಮನಿಸಬೇಕಾದ ಅಂಶ ಹಾಗೂ ಅತ್ಯಂತ ವಿಷಾದಕರ ಸಂಗತಿ. ಅದರಲ್ಲೂ ಮಕ್ಕಳು ಶಾಲೆಗೆ ಸೇರಿ ಓದು ಕಲಿಯುವುದು ಅಥವಾ ಆಟ ಆಡಿಕೊಂಡು ಸಮಯ ಕಳೆಯಬೇಕಾದ ವಯಸ್ಸಿನಲ್ಲಿ ಇಂತಹ ಅಪಾಯಕಾರಿ ಕೆಲಸಗಳಲ್ಲಿ ತೊಡಗುತ್ತಿರುವುದು ಅತ್ಯಂತ ನೋವಿನ ಸಂಗತಿ. ಈ ರೀತಿ ಕೆಲಸದಲ್ಲಿ ತೊಡಗುವ ಮಕ್ಕಳು ಹಾಗೂ ಮಹಿಳೆಯರು ಆರೋಗ್ಯ ಸಮಸ್ಯೆಗಳಾದ ಅಸ್ತಮಾ, ಕ್ಷಯ ಹಾಗೂ ಕ್ಯಾನ್ಸರ್ ಮುಂತಾದ ರೋಗಗಳಿಗೆ ಬಹಳ ಬೇಗ ತುತ್ತಾಗುವುದು ಖಚಿತ," ಎನ್ನುತ್ತಾರೆ, ಬೆಂಗಳೂರಿನ ಚಾಮರಾಜಪೇಟೆ–ಯಲ್ಲಿರುವ ಬಾಸ್ಕೋ ಮನೆಯ ಶ್ರೀ ಪ್ರಕಾಶ್.

> **"ಹೆಚ್ಚು, ಹೆಚ್ಚು ಮಹಿಳೆಯರು ಹಾಗೂ ಮಕ್ಕಳು 'ಚಿಂದಿ ಆಯುವ' ಕೆಲಸದಲ್ಲಿ ತೊಡಗುತ್ತಿರುವುದು ಗಮನಿಸಬೇಕಾದ ಅಂಶ ಹಾಗೂ ಅತ್ಯಂತ ವಿಷಾದಕರ ಸಂಗತಿ. ಅದರಲ್ಲೂ ಮಕ್ಕಳು ಶಾಲೆಗೆ ಸೇರಿ ಓದು ಕಲಿಯುವುದು ಅಥವಾ ಆಟ ಆಡಿಕೊಂಡು ಸಮಯ ಕಳೆಯಬೇಕಾದ ವಯಸ್ಸಿನಲ್ಲಿ ಇಂತಹ ಅಪಾಯಕಾರಿ ಕೆಲಸಗಳಲ್ಲಿ ತೊಡಗುತ್ತಿರುವುದು ಅತ್ಯಂತ ನೋವಿನ ಸಂಗತಿ.**



**ಬೆಂಗಳೂರಿನ ಪಂತರಪಾಳ್ಯದ ಬಳಿಯ ಕೊಳಚೆ ಪ್ರದೇಶದಲ್ಲಿರುವ ಪ್ಲಾಸ್ಟಿಕ್ ಪುನರುತ್ಪಾದಿಸುವ ಘಟಕವೊಂದರ ಬಳಿ ಶೇಖರಿಸಲಾಗಿರುವ ಕಸದ ಚೀಲಗಳು.** ಚಿತ್ರ: ಜಸ್ಟೀಸ್ ಅಂಡ್ ಕೇರ್

"ಬಹಳ ಕಳವಳಕಾರಿಯಾದ ವಿಷಯವೆಂದರೆ, ಚಿಂದಿ ಆಯುವ ಬಹುಪಾಲು ಮಕ್ಕಳು ಲಿಕ್ವಿಡ್ ವೈಟ್ನರ್ (ರಾಸಾಯನಿಕ ದ್ರವ) ಗಳನ್ನು ನೇರವಾಗಿ ಅಥವಾ ಅದರ ವಾಸನೆಯನ್ನು ಸೇವಿಸುವ ಅಪಾಯಕಾರಿ ಚಟಕ್ಕೆ ಬೀಳುತ್ತಿದ್ದಾರೆ. ಈ ದ್ರವ ಅತ್ಯಂತ ಅಪಾಯಕಾರಿ ರಾಸಾಯನಿಕಗಳನ್ನು ಒಳಗೊಂಡಿರುತ್ತದೆ. ಇದನ್ನು ಸೇವಿಸುವುದಾಗಲಿ, ವಾಸನೆ ಸೇವಿಸುವುದಾಗಲಿ ಮಾಡುವುದರಿಂದ ಆರೋಗ್ಯದ ಮೇಲೆ ಅತ್ಯಂತ ದುಷ್ಪರಿಣಾಮ ಬೀರುತ್ತದೆ," ಎನ್ನುತ್ತಾರೆ ಶ್ರೀ ಪ್ರಕಾಶ್. 'ಬಾಸ್ಕೋ' ಸಂಸ್ಥೆಯಿಂದ ಬೆಂಗಳೂರಿನ ಶಿವಾಜಿನಗರ, ಕೆ.ಆರ್.ಮಾರ್ಕೆಟ್, ಚಾಮರಾಜಪೇಟೆ, ಮಾಗಡಿ ರಸ್ತೆಗಳಲ್ಲಿ, ಏಪ್ರಿಲ್ 30, 2010ರಂದು ಕೈಗೊಳ್ಳಲಾದ ಒಂದು ಬಾಲಕಾರ್ಮಿಕ ವಿರೋಧಿ ಜಾಥಾದಲ್ಲಿ ಸುಮಾರು 55 'ಬೀದಿ ಮಕ್ಕಳ'ನ್ನು ಗುರುತಿಸಲಾಯಿತು. ಈ ಮಕ್ಕಳಲ್ಲಿ ಬಹುತೇಕರು ಚಿಂದಿ ಆಯುವ ಕೆಲಸದಲ್ಲಿ ತೊಡಗಿದ್ದವರು, ಮನೆ ಬಿಟ್ಟು ಬಂದವರು, ಕೊಳಚೆ ಪ್ರದೇಶದ ಮಕ್ಕಳು, ಅನಾಥ ಅಥವಾ ಪೋಷಕರಿಲ್ಲದವರಾಗಿದ್ದರು. ಈ ಕೆಲಸದಲ್ಲಿ ತೊಡಗಲು ಮುಖ್ಯ ಕಾರಣ ಕಡು ಬಡತನ, ಶಿಕ್ಷಣದ ಪ್ರಾಮುಖ್ಯತೆಯ ಅರಿವಿನ ಕೊರತೆ, ಮಕ್ಕಳ ಸಾಗಾಟ, ಇತ್ಯಾದಿ.

ಚಿಂದಿ ಆಯುವ ಕೆಲಸದಲ್ಲಿ ತೊಡಗಿರುವ ಮಕ್ಕಳ ಸಂಖ್ಯೆಯ ಬಗ್ಗೆ ನಿಖರವಾದ ಮಾಹಿತಿಯಿಲ್ಲದಿದ್ದರೂ, ಬೆಂಗಳೂರಿನಲ್ಲಿ 'ಬೀದಿ ಮಕ್ಕಳ ಕಲ್ಯಾಣ'ಕ್ಕಾಗಿ ದುಡಿಯುತ್ತಿರುವ ಹಲವು ಸ್ವಯಂಸೇವಾ ಸಂಸ್ಥೆಗಳ ಕಾರ್ಯ-ಕರ್ತರ ಪ್ರಕಾರ ಈ ಸಂಖ್ಯೆ ಅತಿ ಹೆಚ್ಚಿದೆ.

ಬೆಂಗಳೂರಿನ ಬಾಸ್ಕೋದ ಕಾರ್ಯಕಾರಿ ನಿರ್ದೇಶಕರಾದ ಫಾ. ಎಡ್ವರ್ಡ್‌ರವರ ಪ್ರಕಾರ "ಚಿಂದಿ ಆಯುವ ಮಕ್ಕಳು, 'ಬೀದಿ ಮಕ್ಕಳು' ಎಂದು ಗುರುತಿಸಲ್ಪಡುವವರಲ್ಲಿ ಒಂದು ಭಾಗ". ಇಂತಹ ಮಕ್ಕಳನ್ನು ಗುರುತು ಹಚ್ಚಲು ನಾವು ರೈಲ್ವೆ, ಬಸ್ ನಿಲ್ದಾಣ ಹಾಗೂ ಕಲಾಸಿಪಾಳ್ಯಗಳಲ್ಲಿ ಹಲವೆಡೆ 'ರಕ್ಷಣಾ ಮಳಿಗೆ' (child Rescue Booths)ಗಳನ್ನು ಸ್ಥಾಪಿಸಿದ್ದೇವೆ. ನಿರಾಶ್ರಿತ ಮಕ್ಕಳನ್ನು ಕೆಲಸಕ್ಕೆ ಹಚ್ಚುವ ದಲ್ಲಾಳಿಗಳಿಗೆ ಈ ಮಳಿಗೆಗಳು ಕಂಟಕಪ್ರಾಯವಾಗಿವೆ. ಈ ಕೆಲಸದಲ್ಲಿ ತೊಡಗಿರುವ ಬಾಸ್ಕೋದ ಕಾರ್ಯಕರ್ತರು ಒಂಟಿಯಾಗಿ ಅಲೆಯುವ ಮಕ್ಕಳನ್ನು ಗಮನಿಸಿ, ಬಾಸ್ಕೋ ಮನೆಗೆ ಕರೆತಂದು ರಕ್ಷಣೆ, ಊಟ, ವಸತಿ ಕೊಟ್ಟು, ಈ ಮಕ್ಕಳ ಪೋಷಕರನ್ನು ಪತ್ತೆ ಹಚ್ಚಿ ಒಂದುಗೂಡಿಸುವಲ್ಲಿ ನೆರವಾಗುತ್ತಾರೆ. "2008-2009ರ ನಡುವೆ ಇಂತಹ 5,922 ಮಕ್ಕಳನ್ನು ಬೆಂಗಳೂರು ನಗರವೊಂದರಲ್ಲೇ ಗುರುತಿಸಲಾಗಿದೆ," ಎನ್ನುತ್ತಾರೆ ಫಾ. ಎಡ್ವರ್ಡ್. ಇದರಲ್ಲಿ ಬಹುಪಾಲು ಮಕ್ಕಳನ್ನು ಸಾಗಣೆ, ಕೆಲಸ ಕೊಡುವ ಅಥವಾ ಒಳ್ಳೆಯ ಜೀವನ ಕೊಡುವ ನೆಪದಲ್ಲಿ ತಂದು ಬೀದಿ ಪಾಲಾಗಿಸಿದವರಾಗಿದ್ದಾರೆ.

**ಭಾರತ, ಜಗತ್ತಿನಲ್ಲಿಯೇ ಮಕ್ಕಳ ಸಂಖ್ಯೆ ಅತೀ ಹೆಚ್ಚಿರುವ ರಾಷ್ಟ್ರವಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಮೂರನೇ ಒಂದರಷ್ಟು ಮಕ್ಕಳು, ಅಂದರೆ 18 ವರ್ಷ ವಯಸ್ಸಿನ ಕೆಳಗಿರುವವರಾಗಿದ್ದಾರೆ. ಆದರೆ ವಿಷಾದಕರ ಸಂಗತಿಯೆಂದರೆ, ನವಜಾತ ಶಿಶುಗಳ ಮರಣ, ಅಪೌಷ್ಠಿಕತೆ, ಹೆಣ್ಣು ಭ್ರೂಣ ಹತ್ಯೆ, ಶಾಲೆ ಬಿಡುವ ಹೆಣ್ಣು ಮಕ್ಕಳ ಸಂಖ್ಯೆ, ಬಾಲ್ಯವಿವಾಹ, ಮಕ್ಕಳ ಮೇಲಿನ ಲೈಂಗಿಕತೆ ಹಾಗೂ ಇತರ ದೌರ್ಜನ್ಯಗಳೂ ನಮ್ಮ ದೇಶದಲ್ಲಿ ಅತ್ಯಧಿಕ, ಎನ್ನುತ್ತದೆ ಬಾಸ್ಕೋದ ಒಂದು ವರದಿ.**

"ಪ್ಲಾಸ್ಟಿಕ್ ಬಳಕೆಯ ವಿರುದ್ಧ ಜನಜಾಗೃತಿ ಹಾಗೂ ಜನರಲ್ಲಿ ಹೆಚ್ಚಿದ ಸ್ವಚ್ಛತೆ ಹಾಗೂ ಪರಿಸರ ನೈರ್ಮಲ್ಯದ ಬಗೆಗಿನ ತಿಳಿವಳಿಕೆಯಿಂದಾಗಿ ಚಿಂದಿ ಆಯುವ ಮಕ್ಕಳ ಸಂಖ್ಯೆ ಕೊಂಚ ಕಡಿಮೆಯಾಗಿದೆ," ಎನ್ನುತ್ತಾರೆ ಫಾ. ಎಡ್ವರ್ಡ್. "ಇಂತಹ ಮಕ್ಕಳನ್ನು ಚಿಂದಿ ಆಯುವವರು ಎನ್ನುವುದಕ್ಕಿಂತ 'ಪೋಷಕರಿಲ್ಲದವರು' ಅಥವಾ 'ಪಾಲನೆ ವಂಚಿತ' ಮಕ್ಕಳು ಎನ್ನುವುದು ಸೂಕ್ತ ಎಂಬುದು ಅವರ ಅಭಿಪ್ರಾಯ. ಬಾಲಕಾರ್ಮಿಕ ಕಾನೂನಿನ ಪ್ರಕಾರ ಈಗಿರುವ 14 ವರ್ಷ ವಯಸ್ಸನ್ನು, 18ಕ್ಕೆ ಏರಿಸಬೇಕು. ಏಕೆಂದರೆ ಈ ಗುಂಪಿನ ಮಕ್ಕಳು ಬಹಳ ಸುಲಭವಾಗಿ ಬಾಲಕಾರ್ಮಿಕತೆಗೆ ತುತ್ತಾಗುತ್ತಾರೆ.

ಮಾಧ್ಯಮಗಳಲ್ಲಿ ವರದಿಯಾಗಿರುವ ಪ್ರಕಾರ, ರದ್ದಿ ಆವರಣಗಳಲ್ಲಿ ದೊಡ್ಡ ಪ್ರಮಾಣದ ಕಸದ ಗುಡ್ಡೆಗಳು ಉರುಳಿ, ಮಕ್ಕಳೂ ಸೇರಿದಂತೆ ಅನೇಕರು ಪ್ರಾಣ ಕಳೆದುಕೊಂಡ ಪ್ರಸಂಗಗಳು ಉಂಟು.

***(http://beta.thehindu.com/news/cities/Hyderabad/article422763.ece; http://beta.thehindu.com/news/cities/Hyderabad/article421981.ece)***



**ಫಾ. ಎಡ್ವರ್ಡ್**

**“ ಮಕ್ಕಳನ್ನು ಚಿಂದಿ ಆಯುವವರು ಎನ್ನುವುದು ಸೂಕ್ತವಲ್ಲ. ಬದಲಾಗಿ 'ಪೋಷಕರಿಲ್ಲದವರು' ಅಥವಾ 'ಪಾಲನೆ ವಂಚಿತ' ಮಕ್ಕಳು ಎನ್ನುವುದು ಸೂಕ್ತ.**



**ಎಂಎಸ್‌ಡಬ್ಲ್ಯೂ ವ್ಯಾಸಂಗ ಮಾಡುತ್ತಿರುವ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಜಾಥಾಕ್ಕೆ ಹೊರಡುವ ಮುನ್ನ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ 'ಬಾಸ್ಕೋ ಮನೆ ಯ ಮುಂದೆ ಸೇರಿರುವುದು.**

ಚಿಂದಿ ಆಯುವ ಮಕ್ಕಳು ಹಾಗೂ ಮಹಿಳೆಯರಲ್ಲಿ ಅಪೌಷ್ಠಿಕತೆ ಹಾಗೂ ಅನಾರೋಗ್ಯ ಸರ್ವೇ ಸಾಮಾನ್ಯ. ಇದರಿಂದಾಗಿ ಮಕ್ಕಳ ಹಾಗೂ ಮಹಿಳೆಯರ ಮರಣ ಸಂಖ್ಯೆ ದೇಶದಲ್ಲಿ ಹೆಚ್ಚಿದೆ. ಅಪೌಷ್ಠಿಕತೆ ಒಂದು ದೊಡ್ಡ ಸಮಸ್ಯೆ. ಕಡು ಬಡತನದಿಂದಾಗಿ ಹಸಿವೆಯಿಂದ ಬಳಲುವವರಲ್ಲಿ ಇದು ಹೆಚ್ಚು.

***(http://www.niramaya.org/events1.html)***

ಅಮೆರಿಕಾ ಹಾಗೂ ಯುನೈಟೆಡ್ ಕಿಂಗ್–ಡಮ್‌ನಂತಹ ರಾಷ್ಟ್ರಗಳಲ್ಲಿ ಪುನರುತ್ಪಾದಕ ಘಟಗಳು ಅತ್ಯಂತ ಸಮರ್ಥವಾಗ ಕೆಲಸ ಮಾಡುತ್ತವೆ. ಇದರ ಹೊರತಾಗಿಯೂ, ಜನರಲ್ಲಿ ಕಸ ವಿಲೇವಾರಿ ಹಾಗೂ ಬೇರ್ಪಡಿಸುವ ಬಗ್ಗೆ ಅರಿವು ಕೂಡ ಹೆಚ್ಚಿದೆ. ಭಾರತದ ಜನರಲ್ಲಿ ಈ ಬಗ್ಗೆ ಹೆಚ್ಚು ಅರಿವು ಇದ್ದಿದ್ದಲ್ಲಿ, ಚಿಂದಿ ಆಯುವವರಲ್ಲಿ ಆಸ್ತಮಾ, ಕ್ಷಯ, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಗೆ ತುತ್ತಾಗುವವರ ಸಂಖ್ಯೆ ಕಡಿಮೆಯಿರುತ್ತಿತ್ತು.

***(http://itsafreeworld.wordpress.com/2007/11/16/hail-our-ragpickers-save-them)***

ಬೆಂಗಳೂರು ನಗರವೊಂದರಲ್ಲೇ 'ಬೀದಿ ಮಕ್ಕಳ' ಸಂಖ್ಯೆ 80,000ಕ್ಕೂ ಹೆಚ್ಚಿದೆ ಎನ್ನುವುದು, ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಹಲವು ಸ್ವಯಂಸೇವಾ ಸಂಸ್ಥೆಗಳ ವಾದ. ಬಾಸ್ಕೋದ ಫಾ. ಎಡ್ವರ್ಡ್‌ರವರ ಪ್ರಕಾರ ನಗರದ ಮೆಜೆಸ್ಟಿಕ್ ಪ್ರದೇಶವೊಂದರಲ್ಲೇ ದಿನವೂ 20ಕ್ಕಿಂತ ಹೆಚ್ಚು ಬೀದಿ ಮಕ್ಕಳನ್ನು ಕಾಣಬಹುದು ಎನ್ನುವ ಆತಂಕಕಾರಿ ಹೇಳಿಕೆ ಈ ಸಂಖ್ಯೆಗೆ ಪುಷ್ಟಿ ನೀಡುತ್ತದೆ.

"ಬೀದಿ ಮಕ್ಕಳ ಬವಣೆಗಳನ್ನು ನೀಗಿಸಲು, ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಿತಗೊಂಡ 'ಹಿಂದೂ ಸೇವಾ ಪ್ರತಿಷ್ಠಾನ', ಮಕ್ಕಳ ಕಲ್ಯಾಣಕ್ಕಾಗಿ 'ನೆಲೆ'ಯನ್ನು ಸ್ಥಾಪಿಸಿದೆ. ಬೀದಿ ಮಕ್ಕಳನ್ನು ರಕ್ಷಿಸಿ ಅವರಿಗೆ ತಾತ್ಕಾಲಿಕವಾಗಿ ಊಟ, ವಸತಿ ಒದಗಿಸಿ ಸೂಕ್ತ ಮಾರ್ಗದರ್ಶನ ನೀಡುವ ಕೆಲಸದಲ್ಲಿ ತೊಡಗಿದೆ. ಅಲೆಮಾರಿತನವನ್ನು ಮೈಗೂಡಿಸಿಕೊಂಡ ಇಂತಹ ಮಕ್ಕಳು ಆರಂಭದಲ್ಲಿ 'ನೆಲೆ'ಯಲ್ಲಿ ನೆಲೆ ಕಂಡುಕೊಳ್ಳುವಲ್ಲಿ ವಿಫಲವಾದರು. ಇದನ್ನು ಕಂಡುಕೊಂಡು ಮಕ್ಕಳ ಮನವೊಲಿಸಲು ಸ್ವಲ್ಪ ಬದಲಾವಣೆಗಳನ್ನು ಅಳವಡಿಸಿಕೊಳ್ಳಲಾಯಿತು. ಮಕ್ಕಳಿಗೆ ಹೊರ ಹೋಗುವ ಸಮಯವನ್ನು ಹೆಚ್ಚಿಸಲಾಯಿತು. ಬೆಳಗಿನ ಸಮಯದಲ್ಲಿ ಶ್ಲೋಕಗಳನ್ನು ಹೇಳಿಕೊಡುವ ಮೂಲಕ, ಪೌಷ್ಠಿಕವಾದ ಆಹಾರ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವುದರಿಂದ ಮಕ್ಕಳು 'ನೆಲೆ'ಯನ್ನು ಹೆಚ್ಚು ಆಶ್ರಯಿಸತೊಡಗಿದರು. 2008ರಲ್ಲಿ ಸ್ಥಾಪಿತಗೊಂಡ 'ನೆಲೆ'ಯಲ್ಲಿ 14 ಮಕ್ಕಳಿದ್ದರು. ಈಗ ಇಲ್ಲಿ 100ಕ್ಕಿಂತ ಹೆಚ್ಚು ಮಕ್ಕಳು ಇದ್ದು, 'ನೆಲೆ' ಮೂರು ಕೇಂದ್ರಗಳನ್ನು ಹೊಂದಿದೆ," ಎನ್ನುತ್ತಾರೆ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ 'ಆಪ್ಸಾ'ದಲ್ಲಿ ಕಾರ್ಯ ನಿರ್ವಹಿಸುವ ಶ್ರೀ ಸುರೇಶ್.

'ಬೀದಿ ಮಕ್ಕಳೆಂದರೆ ಯಾರು?' ಎಂಬುನ್ನು ಯುನೈಟೆಡ್ ನೇಷನ್ಸ್ ಹೀಗೆ ವಿಶ್ಲೇಷಿಸುತ್ತದೆ. 'ಬೀದಿಯಲ್ಲಿ ಅಥವಾ ಫುಟ್‌ಪಾತ್‌ನಲ್ಲಿ ವಾಸಿಸುವ, ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಆದರೆ ಬಹುಪಾಲು ಸಮಯವನ್ನು ಬೀದಿಯಲ್ಲಿ ಏನಾದರೊಂದು ಕೆಲಸದಲ್ಲಿ ತೊಡಗಿರುವ ಮಕ್ಕಳು, ಚಿಂದಿ ಆಯುವ, ಷೂ ಪಾಲೀಶ್ ಮಾಡುವ, ಸಣ್ಣ ವ್ಯಾಪಾರ ಮಾಡುವ, ಕೂಲಿ ಮಾಡುವ, ಸಹಾಯಕರಾಗಿ ದುಡಿಯುವ, ಬೀದಿ ಬದಿಯ ಟೀ ಅಂಗಡಿಗಳು, ಸಣ್ಣ ಕ್ಯಾಂಟೀನ್‌ಗಳು, ಗ್ಯಾರೇಜ್‌ಗಳು, ಇತ್ಯಾದಿ ಕೆಲಸದಲ್ಲಿರುವ ಮಕ್ಕಳು. "ಇಂತಹ ಮಕ್ಕಳ ನಿರ್ಧಿಷ್ಟ ಸಂಖ್ಯೆಯನ್ನು ಗುರುತಿಸುವುದು ಕಷ್ಟ. ಈ ಪಟ್ಟಿಯಲ್ಲಿ ಬಹಳಷ್ಟು ಹೆಣ್ಣು ಮಕ್ಕಳೂ ಸೇರಿದ್ದಾರೆ," ಎನ್ನುತ್ತಾರೆ ಶ್ರೀ ಸುರೇಶ್.

ಬಹುಪಾಲು ಚಿಂದಿ ಆಯುವ ಮಕ್ಕಳು ಹಲವು ಅನಿವಾರ್ಯ ಪರಿಸ್ಥಿತಿಗಳಲ್ಲಿ ಈ ಕೆಲಸಕ್ಕೆ ಬಂದಿರುತ್ತಾರೆ. ಅವುಗಳಲ್ಲಿ ಮನೆಯಲ್ಲಿ ಜಗಳ, ತಂದೆ, ತಾಯಿ, ಕುಟುಂಬದ ಇತರೆ ಸದಸ್ಯರಿಂದ ಕಿರುಕುಳ, ಕಡು ಬಡತನ, ಮಲತಾಯಿಯಿಂದ ತೊಂದರೆ, ಪೋಷಕರ ನಡುವೆ ಜಗಳ, ನಿರ್ಲಕ್ಷ್ಯತನ, ಹಸಿವು, ಪ್ರೀತಿಯ ಕೊರತೆ, ಇತ್ಯಾದಿ ಮುಖ್ಯ.



**ಬೆಂಗಳೂರಿನ ಪಂತರಪಾಳ್ಯದಲ್ಲಿ ಬಿಸಾಡಿರುವ ಅಪಾರ ಪ್ರಮಾಣದ ಪ್ಲಾಸ್ಟಿಕ್ ವೇಸ್ಟ್.**



**ಬೆಂಗಳೂರಿನ ಮೈಸೂರು ಬ್ಯಾಂಕ್ ಬಳಿಯಿರುವ ಹನುಮಂತನ ದೇವಸ್ಥಾನದ ಬಳಿ ಮಗುವೊಂದು ಅಮಾಯಕವಾಗಿ ಕುಳಿತಿರುವುದು. ಈ ಮಗುವಿನ ತಾಯಿ, ಮಗುವಿನ ಬಗ್ಗೆ ಯಾವ ಕಾಳಜಿಯಿಲ್ಲದೆ, 5 ಮೀ. ದೂರದಲ್ಲಿ ಭಿಕ್ಷೆ ಬೇಡುತ್ತಿರುವುದು ಕಂಡು ಬಂದಿತು. ನಗರದಲ್ಲಿ ಪೋಷಕರ ಕಾಳಜಿಯಿಲ್ಲದೆ ಸೊರಗುತ್ತಿರುವ ಮಕ್ಕಳ ಸಂಖ್ಯೆಗೆ, ಚಿತ್ರದಲ್ಲಿರುವ ಮಗು ಸಾಕ್ಷಿ.** ಚಿತ್ರ ಕೃಪೆ: ಆಪ್ತಾ

ಬಹುಪಾಲು ಗಂಡು ಮಕ್ಕಳು ತಂದೆ ಅಥವಾ ತಾಯಿಂದ ಕಿರುಕುಳ ತಾಳಲಾರದೆ ಮನೆಯಿಂದ ಹೊರ ಬರುತ್ತಾರೆ. ಹೆಣ್ಣು ಮಕ್ಕಳು ಮುಖ್ಯವಾಗಿ ಶಿಶುಪಾಲನೆ ಜವಾಬ್ದಾರಿ, ಭಿಕ್ಷಾಟನೆಗೆ ದೂಡುವುದರಿಂದ ಮನೆ ಬಿಡುವ ಕಾರಣಗಳು ಇವೆ. ಚಿಂದಿ ಆಯುವ ಮಕ್ಕಳು ಸಾಮಾನ್ಯವಾಗಿ 5–6 ವರ್ಷ ವಯಸ್ಸಿನವರು ಹೆಚ್ಚು, ಅದರಲ್ಲೂ ಹಿಂದುಳಿದ ಜನಾಂಗದವರು ಎಂಬುದನ್ನು ಗಮನಸಿಬೇಕು.

ಬೀದಿ ಮಕ್ಕಳಲ್ಲಿ ಗುಳೆ ಹೋಗುವ ಮಕ್ಕಳು ಸೇರಿದ್ದಾರೆ. ಒಂದು ಅಂದಾಜಿನ ಪ್ರಕಾರ ಬೆಂಗಳೂರು ನಗರದಲ್ಲಿ ಗಾರೆ ಕೆಲಸದಲ್ಲಿ ದುಡಿಯುತ್ತಿರುವ 75ರಷ್ಟು ಬಾಲಕಾರ್ಮಿಕರು ಬಿಹಾರ, ಉತ್ತರಪ್ರದೇಶ, ರಾಜಸ್ಥಾನ, ತಮಿಳುನಾಡು, ಛತ್ತೀಸಘಡ ಮತ್ತು ಆಂಧ್ರಪ್ರದೇಶದಿಂದ ಬಂದವರು. ಮಕ್ಕಳು ಇಂತಹ ಕೆಲಸಗಳಲ್ಲಿ ತೊಡಗಲು ದಲ್ಲಾಳಿಗಳು ಕಾರಣ. ಪೋಷಕರಿಗೆ ಹಣದ ಆಮಿಷವೊಡ್ಡಿ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿಸುತ್ತಾರೆ. ಮಕ್ಕಳನ್ನು ಲೋಹದ ತುಂಡುಗಳು, ಗಾಜಿನ ತುಂಡುಗಳು, ಮತ್ತಿತರ ಅಪಾಯಕಾರಿ ವಸ್ತುಗಳನ್ನು ಕಸದ ಡಬ್ಬಗಳಿಂದ ಆಯುವ ಕೆಲಸದಲ್ಲಿ ತೊಡಗಿಸುತ್ತಾರೆ. ಬದಲಾಗಿ ಈ ಮಕ್ಕಳಿಗೆ ಬಹಳ ಕಡಿಮೆ ಕೂಲಿ ನೀಡಲಾಗುತ್ತದೆ. ಪೋಷಕರ ಮಾರ್ಗದರ್ಶನವಿಲ್ಲದ ಈ ಮಕ್ಕಳು ಕುಡಿತ, ಧೂಮಪಾನದಂತಹ ಚಟಗಳಿಗೆ ಬಲಿಯಾಗುತ್ತಾರೆ. ಇದಲ್ಲದೆ ತಮಗೆ ಅರಿವಿಲ್ಲದೆಯೇ ಲೈಂಗಿಕ ಶೋಷಣೆಗೂ ಒಳಗಾಗಿ, ಹೆಚ್‌ಐವಿ, ಏಡ್ಸ್‌ನಂತಹ ಖಾಯಿಲೆಗಳಿಗೆ ತುತ್ತಾಗುತ್ತಾರೆ.

“ **ಪೋಷಕರಿಗೆ ಹಣದ ಆಮಿಷವೊಡ್ಡಿ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿಸುತ್ತಾರೆ. ಮಕ್ಕಳನ್ನು ಲೋಹದ ತುಂಡುಗಳು, ಗಾಜಿನ ತುಂಡುಗಳು, ಮತ್ತಿತರ ಅಪಾಯಕಾರಿ ವಸ್ತುಗಳನ್ನು ಕಸದ ಡಬ್ಬಗಳಿಂದ ಆಯುವ ಕೆಲಸದಲ್ಲಿ ತೊಡಗಿಸುತ್ತಾರೆ. ಬದಲಾಗಿ ಈ ಮಕ್ಕಳಿಗೆ ಬಹಳ ಕಡಿಮೆ ಕೂಲಿ ನೀಡಲಾಗುತ್ತದೆ.**

ಈ ಮಕ್ಕಳು ದಿನವೊಂದಕ್ಕೆ ರೂ. 15 ರಿಂದ ರೂ. 100ರವರೆಗೆ ದುಡಿಯುತ್ತಾರೆ. ಮಕ್ಕಳಿಗೆ ಬೇರೆ ಕೆಲಸಗಳಲ್ಲಿ ತೊಡಗಲು ಇಷ್ಟವಿದ್ದರೂ, ಇವರನ್ನು ಸಮಾಜ ನಿರ್ಲಕ್ಷಿಸುವುದರಿಂದ ಶೋಷಣೆಗೊಳಗಾಗುತ್ತಿದ್ದಾರೆ. ಹಲವು ವರದಿಗಳ ಪ್ರಕಾರ ಬೀದಿ ಮಕ್ಕಳಲ್ಲಿ ಬಹುತೇಕರು ಓದಲು ಆಸಕ್ತಿ ಹೊಂದಿದವರಾಗಿರುತ್ತಾರೆ. ಅವಕಾಶ ಸಿಕ್ಕಾಗಿ ಒಳ್ಳೆಯ ಪ್ರಜೆಗಳಾಗಲು ಇಚ್ಛಿಸುತ್ತಾರೆ. ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಂತಹ ಹಲವು ಮಕ್ಕಳು ಉತ್ತೀರ್ಣರಾಗಿರುವುದು ಇದಕ್ಕೆ ಸಾಕ್ಷಿ.

***(http://www.hinduonnet.com/2010/05/12/stories/2010051253930300.htm)***

ಅಂಕಿ–ಅಂಶಗಳನ್ನು ಬದಿಗಿಟ್ಟು ಬೀದಿ ಮಕ್ಕಳ/ ಚಿಂದಿ ಆಯುವ ಮಕ್ಕಳ ದಾರುಣ ಜೀವನದ ಕಡೆ ಮಾನವೀಯ ದೃಷ್ಟಿ ಹಾಯಿಸಿದರೆ ಮನ ಕಲುಕುವ ನಿಜಾಂಶಗಳು ಹೊರಬರುವುದು ಸತ್ಯ. ಸರ್ಕಾರ ಬಾಲಕಾರ್ಮಿಕತೆಯ ನಿರ್ಮೂಲನೆಗೆ ಹಾಗೂ ಬೀದಿ ಮಕ್ಕಳಿಗೆ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ–ಯಾದರೂ, ಅದಕ್ಕೆ ಹೊಸ ವಿಚಾರಗಳನ್ನು ಅಳವಡಿಸಿ, ಬಲಪಡಿಸಬೇಕು ಎನ್ನುವುದು ಅಭಿವೃದ್ಧಿಗಾಗಿ ದುಡಿಯುತ್ತಿರುವ ಹಲವು ಮಂದಿಯ ಅಭಿಪ್ರಾಯ.

“ **ಪೋಷಕರ ಮಾರ್ಗದರ್ಶನವಿಲ್ಲದ ಈ ಮಕ್ಕಳು ಕುಡಿತ, ಧೂಮಪಾನದಂತಹ ಚಟಗಳಿಗೆ ಬಲಿಯಾಗುತ್ತಾರೆ. ಇದಲ್ಲದೆ ತಮಗೆ ಅರಿವಿಲ್ಲದೆಯೇ ಲೈಂಗಿಕ ಶೋಷಣೆಗೂ ಒಳಗಾಗಿ, ಹೆಚ್‌ಐವಿ, ಏಡ್ಸ್‌ನಂತಹ ಖಾಯಿಲೆಗಳಿಗೆ ತುತ್ತಾಗುತ್ತಾರೆ.**

“ಸ್ವಯಂಸೇವಾ ಸಂಸ್ಥೆಗಳು ನೀಡಿರುವ ಅಂಕಿ–ಅಂಶಗಳು ಸಂಪೂರ್ಣ ಸತ್ಯವಲ್ಲ. ಈ ಅಂಕಿಗಳನ್ನು ನಾವು ಪರಿಗಣಿಸಲಾಗುವುದಿಲ್ಲ,” ಎನ್ನುತ್ತಾರೆ ಬೆಂಗಳೂರು ದಕ್ಷಿಣ ವೃತ್ತದ ಕಾರ್ಮಿಕ ಅಧಿಕಾರಿ ಶ್ರೀ ಎಂ.ಎನ್. ದೇವರಾಜ್. ಇಲಾಖೆ, ಬಾಲಕಾರ್ಮಿಕ ನಿರ್ಮೂಲನೆಯೆಡೆಗೆ ಕಾರ್ಯ ನಿರ್ವಹಿಸಲು ಬದ್ಧ. ಯಾರೇ ದೂರು ನೀಡಿದರು ಪರಿಶೀಲಿಸಿ ಕ್ರಮ ಕೈಗೊಳ್ಳಲು ನಾವು ಸದಾ ಸಿದ್ಧ. ಹಾಗೆಯೇ ಬೀದಿ ಮಕ್ಕಳೆಲ್ಲರನ್ನೂ ಬಾಲಕಾರ್ಮಿಕರೆಂದು ಪರಿಗಣಿಸಲಾಗುವುದಿಲ್ಲ. ಬೀದಿ ಮಕ್ಕಳಿಗಾಗಿ ದುಡಿಯಲು ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆಗಳು ಇವೆ. “ಇತ್ತೀಚೆಗೆ ನಗರದ ನಾಯಂಡಹಳ್ಳಿಯಲ್ಲಿ ನಡೆದ ಮಕ್ಕಳ ರಕ್ಷಣಾ ಕಾರ್ಯಾಚರಣೆಯಲ್ಲಿ ಒಟ್ಟು 35 ಬಾಲಕರನ್ನು ರಕ್ಷಿಸಲಾಯಿತು. ಅವರಲ್ಲಿ 9 ಮಂದಿ 14 ವರ್ಷದೊಳಗಿರುವವರು. ಈ ಮಕ್ಕಳನ್ನು ಬಾಲಕಾರ್ಮಿಕರು ಎನ್ನಬಹುದು, ಉಳಿದವರು 14 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ. ರಕ್ಷಿಸಲಾದವರಲ್ಲಿ ಬಹುಪಾಲು ಬೇರೆ ರಾಜ್ಯಗಳು ಅಂದರೆ ಬಿಹಾರ, ಇತ್ಯಾದ ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಕಾರ್ಮಿಕ ಇಲಾಖೆ ಇಂತಹ ಮಕ್ಕಳನ್ನು ರಕ್ಷಿಸಿ, ಪುನರ್ವಸತಿ ಕಲ್ಪಿಸಲು ಸದಾ ಬದ್ಧ. ಈ 9 ಮಕ್ಕಳಿಗೂ ಸಹ ಪುನರ್ವಸತಿ ಕಲ್ಪಿಸಲಾಗಿದೆ.”

# ೫೬ ಪ್ರಶ್ನೆ-ಭಿನ್ನ ಉತ್ತರ

**ಶ್ರೀಮತಿ ಪದ್ಮಿನಿ ವೆಂಕಟಸುಬ್ಬಯ್ಯ**
ಗೃಹಿಣಿ, ವೈಟ್ ಹೌಸ್ ಅಪಾರ್ಟ್‌ಮೆಂಟ್ಸ್,
ಆರ್.ಟಿ.ನಗರ, ಬೆಂಗಳೂರು.

1. **ಕರ್ನಾಟಕ ಸರ್ಕಾರದ ಸಂಯೋಜನೆಯೊಂದಿಗೆ 2007ರಲ್ಲಿ ಯುನಿಸೆಫ್ ಕೈಗೊಂಡ ಸಮೀಕ್ಷೆಯೊಂದರ ಪ್ರಕಾರ, ಬೆಂಗಳೂರಿನ ಕೆಲವು ಕೊಳಚೆ ಪ್ರದೇಶಗಳಲ್ಲಿ ಪ್ರತಿ 20,000 ಮನೆಗಳಲ್ಲಿ 1,000ದಷ್ಟು ಬಾಲಕ/ಬಾಲಕಿಯರು ದುಡಿಯುತ್ತಿದ್ದಾರೆ. ನಿಮ್ಮ ಪ್ರಕಾರ ಈ ಪಿಡುಗನ್ನು ಹೇಗೆ ತೊಡೆದುಹಾಕಬಹುದು?**

ಉ: ಸರ್ಕಾರ ಹಾಗೂ ಹಲವು ಸ್ವಯಂಸೇವಾ ಸಂಘಗಳ ಪ್ರಯತ್ನಗಳಿಂದ ಬಾಲಕಾರ್ಮಿಕತೆ ಕಡಿಮೆಯಾಗಿದೆ ಎಂಬ ಕಲ್ಪನೆಯಲ್ಲಿದ್ದ ನನಗೆ ಈ ಸಂಖ್ಯೆ ಅಚ್ಚರಿ ತಂದಿದೆ. ಬಾಲಕಾರ್ಮಿಕತೆಯ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸುವುದರ ಜೊತೆಗೆ, ಶಿಕ್ಷಣ ಹಾಗೂ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ನನಗನಿಸುತ್ತದೆ. ಹಾಗೆ ಮಾಡಿದಾಗ ಮಾತ್ರ ಬಾಲಕಾರ್ಮಿಕತೆ-ಯಿಂದ ಮಕ್ಕಳನ್ನು ಪಾರು ಮಾಡಿ ಶಿಕ್ಷಣದ ದಾರಿಯನ್ನು ತೋರಿಸಬಹುದು. ಇದರ ಜೊತೆಗೆ ಸರ್ಕಾರದ ಹಲವು ಕಾರ್ಯಕ್ರಮಗಳಾದ ಶಿಕ್ಷಣದ ಹಕ್ಕುಗಳು, ಮಧ್ಯಾಹ್ನದ ಊಟ, ಇತರೆ ಸವಲತ್ತುಗಳ ಬಗ್ಗೆ, ಟಿವಿ, ನ್ಯೂಸ್‌ಪೇಪರ್ ಹಾಗೂ ಇತರ ಮಾಧ್ಯಮಗಳ ಮೂಲಕ ಜನರಲ್ಲಿ ಹೆಚ್ಚಾಗಿ ಅರಿವು ಮೂಡಿಸಬೇಕಿದೆ.

2. **ಭಾರತಕ್ಕೆ ಹೋಲಿಸಿದಲ್ಲಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಬಾಲಕಾರ್ಮಿಕತೆಯ ತೀವ್ರತೆ ಕಡಿಮೆ. ಭಾರತೀಯರಾಗಿ ನಾವು ಮಕ್ಕಳನ್ನು ದುಡಿಮೆಗೆ ಹೆಚ್ಚು ಉಪಯೋಗಿಸಿ-ಕೊಳ್ಳುತ್ತಿದ್ದೇವೆಂದು ನಿಮಗೆ ಅನಿಸುತ್ತದೆಯೇ?**

ಉ: ನಾನು ಪ್ರಸ್ತುತ ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ಅಪಾರ್ಟ್-ಮೆಂಟ್ ಕಾಂಪ್ಲೆಕ್ಸ್ ಒಂದರಲ್ಲಿ ವಾಸಿಸುತ್ತಿದ್ದೇನೆ. ಇಲ್ಲಿರುವ ಮನೆಗಳಿಗೆ ಕೆಲಸಕ್ಕೆ ಬರುವ ಎಲ್ಲ ಸಹಾಯಕರಿಗೆ, ಇಲ್ಲಿನ ನಿರ್ವಾಹಕರು 'ಪಾಸ್‌ಗಳನ್ನು' ನೀಡುತ್ತಾರೆ ಹಾಗೆಯೇ, 14 ವರ್ಷಕ್ಕಿಂತ ಕೆಳಗಿರುವ ಮಕ್ಕಳಿಗೆ ಪಾಸ್ ಸಿಗದಂತೆ ನೋಡಿಕೊಳ್ಳುತ್ತಾರೆ. ಹಾಗಾಗಿ ನಮ್ಮಲ್ಲಿ ಈ ಪದ್ಧತಿ ಇಲ್ಲವೇ ಇಲ್ಲ. ಇಂತಹ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವು-ದರಿಂದ ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟಬಹುದು ಎಂಬುದು ನನ್ನ ಅಭಿಪ್ರಾಯ.

3. **ಹಲವು ಸರ್ಕಾರಿ ನಿಬಂಧನೆಗಳ ನಡುವೆಯೂ, ಮಾಧ್ಯಮಗಳಲ್ಲಿ ತೋರಿಸುವಂತೆ ಮನೆಗೆಲಸದ ಮಕ್ಕಳ ಮೇಲಿನ ಶೋಷಣೆ ಇಂದಿಗೂ ನಡೆಯುತ್ತಿದೆ. ಬಾಲಕಾರ್ಮಿಕತೆಯ ವಿರುದ್ಧ ಮಾಲೀಕರಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಇದನ್ನು ತೊಲಗಿಸಬಹುದು ಎಂದು ನಿಮಗನಿಸುತ್ತದೆಯೇ? ಅಥವಾ ಕಠಿಣ ಕಾನೂನು ಕ್ರಮಗಳನ್ನು ಅಳವಡಿಸುವುದು ಸೂಕ್ತ ಎಂದು ಅನಿಸುತ್ತದೆಯೋ?**

ಉ: ಕಠಿಣ ಕಾನೂನು ಕ್ರಮಗಳಿಂದ ಜನರಲ್ಲಿ ಭಯ ಮೂಡಿಸಬಹುದು. ಆದರೆ ಶೋಷಣೆಯ ವಿರುದ್ಧ ಮನೆ ಕೆಲಸಕ್ಕೆ ಹೋಗುವ ಮಹಿಳೆಯರಲ್ಲಿ ಅರಿವು ಮೂಡಿಸಿ, ಬಾಲಕಾರ್ಮಿಕತೆಯ ವಿರುದ್ಧ ದನಿ ಎತ್ತುವಂತೆ ಮಾಡುವುದು ಹೆಚ್ಚು ಸೂಕ್ತ. ಶಿಕ್ಷಣದ ಹಾಗೂ ಇತರೆ ಹಕ್ಕುಗಳ ಅರಿವಿನ ಜೊತೆಗೆ ಸೂಕ್ತ ಕೌಶಲ್ಯ ತರಬೇತಿ ನೀಡುವುದರಿಂದ ಹೆಚ್ಚಿನ ಪರಿಣಾಮ ಬೀರಬಹುದು.

4. **ಸಮಾಜದಲ್ಲಿ ಬಾಲಕಾರ್ಮಿಕತೆಯು ಪಿಡುಗನ್ನು ನಿರ್ಮೂಲನೆ ಮಾಡುವುದನ್ನು ಕಡೆಗಣಿಸಲಾಗುತ್ತಿದೆ ಅಥವಾ ಕನಿಷ್ಠವಾಗಿ ಕಾಣಲಾಗುತ್ತಿದೆ ಎಂದು ನಿಮಗನಿಸುತ್ತದೆಯೇ?**

ಉ: ಸಮಾಜ ಎಂದರೆ ವ್ಯಕ್ತಿಗಳು. ಹಾಗೂ ಸಮಾಜದ ದೃಷ್ಟಿ ಯಾವಾಗಲೂ ರಾಜಕೀಯ, ಕ್ರೈಂನಂತಹ ಸಮಸ್ಯೆಗಳತ್ತ ಮಾತ್ರ ನೆಟ್ಟಿರುತ್ತದೆ. ಬಾಲಕಾರ್ಮಿಕತೆ-ಯಂತಹ ಸಮಸ್ಯೆ ಜನರ ದೃಷ್ಟಿಯಲ್ಲಿ ಬರುವುದಿಲ್ಲ. ಹಾಗಾಗಿ ಕಠಿಣ ಕಾನೂನುಗಳನ್ನು ಜಾರಿಗೊಳಿಸುವುದರಿಂದ ಹಾಗೂ ಸತತವಾಗಿ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನಗಳಿಂದ ಇದನ್ನು ತಡೆಗಟ್ಟಲು ಸಾಧ್ಯ. ಬಾಲಕಾರ್ಮಿಕತೆಯ ವಿರುದ್ಧ ದೂರು ದಾಖಲಿಸಲು ಸಹಾಯ-ವಾಣಿ/ಇ-ಮೇಲ್/ವೆಬ್‌ಸೈಟ್ ಅನ್ನು ಸ್ಥಾಪಿಸುವುದು, ದೂರು ದಾಖಲಿಸುವವರ ಗುರುತನ್ನು ಗೌಪ್ಯವಾಗಿಡುವುದು ಅಗತ್ಯ. ದೂರು ದಾಖಲಿಸಿದ ಕೂಡಲೇ ಸಂಬಂಧಪಟ್ಟ ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳಬೇಕು. ಈ ವ್ಯವಸ್ಥೆಗಳು ಬಾಲಕಾರ್ಮಿಕತೆಯನ್ನು ಪ್ರೋತ್ಸಾಹಿಸು-ವವರಲ್ಲಿ ಭಯ ಮೂಡಿಸಿ ಬದಲಾವಣೆ ತರುವಲ್ಲಿ ಸಹಾಯ ಮಾಡುತ್ತದೆ.

5. **ಜೂನ್ 12 ರಂದು 'ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ' ಆಚರಿಸಲಾಗುತ್ತಿದೆ. ಉತ್ತಮ ನಾಗರೀಕರಾಗಿ ಸಮಾಜಕ್ಕೆ ನಿಮ್ಮ ಸಂದೇಶವೇನು?**

ಉ: ಜೂನ್ 12 ರಂದು ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಂಕಲ್ಪ ಮಾಡುವುದರ ಮೂಲಕ ಭಾರತ, ಪ್ರಪಂಚದ 'ಸೂಪರ್ ಪವರ್' ರಾಷ್ಟ್ರವಾಗುವುದಕ್ಕೆ ನೆರವಾಗಬೇಕು ಎಂಬುದು ನನ್ನ ಆಶಯ. ಈ ಕಾರ್ಯ ಕಷ್ಟಕರ, ಆದರೆ ಎಲ್ಲರೂ ಒಟ್ಟುಗೂಡಿ 'ಬಾಲಕಾರ್ಮಿಕ ಪದ್ಧತಿಯನ್ನು' ವಿರೋಧಿಸಿದರೆ ಇದು ಸಾಧ್ಯ.

---

**ಶ್ರೀಮತಿ ಜಾಗೇಶ್ರೀ**
ಪತ್ರಕರ್ತರು, 'ದಿ ಹಿಂದೂ,
ಬೆಂಗಳೂರು.

1. **ಕರ್ನಾಟಕ ಸರ್ಕಾರದ ಸಂಯೋಜನೆ-ಯೊಂದಿಗೆ 2007ರಲ್ಲಿ ಯುನಿಸೆಫ್ ಕೈಗೊಂಡ ಸಮೀಕ್ಷೆಯೊಂದರ ಪ್ರಕಾರ, ಬೆಂಗಳೂರಿನ ಕೆಲವು ಕೊಳಚೆ ಪ್ರದೇಶಗಳಲ್ಲಿ ಪ್ರತಿ 20,000 ಮನೆಗಳಲ್ಲಿ 1,000ದಷ್ಟು ಬಾಲಕ/ಬಾಲಕಿಯರು ದುಡಿಯುತ್ತಿದ್ದಾರೆ. ನಿಮ್ಮ ಪ್ರಕಾರ ಈ ಪಿಡುಗನ್ನು ಹೇಗೆ ತೊಡೆದುಹಾಕಬಹುದು?**

ಉ: ಬೆಂಗಳೂರಿನಂತಹ ಮಹಾನಗರಗಳಲ್ಲಿ, 'ಬಾಲಕಾರ್ಮಿಕತೆ' ಎಂಬ ಸಾಮಾಜಿಕ ಪಿಡುಗನ್ನು ಬೇರೆ ಸಮಸ್ಯೆಗಳೊಂದಿಗೆ ಹೋಲಿಸಿ, ಬೇರ್ಪಡಿಸಿ, ಪ್ರಾಮುಖ್ಯತೆ ನೀಡುವುದು ಬಹಳ ಕಷ್ಟದ ಕೆಲಸ. ಉತ್ತರ ಕರ್ನಾಟಕ ಹಾಗೂ ಉತ್ತರ ಭಾರತದ ಕಡೆಯಿಂದ ವಲಸೆ ಬರುವ ಜನರಿಂದಾಗಿ ಉದ್ಭವವಾಗುತ್ತಿರುವ ಸಮಸ್ಯೆಗಳೂ ಹೆಚ್ಚಿದ್ದು, ಇದರೊಂದಿಗೆ ಬಾಲ-ಕಾರ್ಮಿಕತೆ ಸಮಸ್ಯೆಯನ್ನು ನೋಡಬೇಕಾಗುವುದು. ಇನ್ನೊಂದೆಡೆ ಸಮಾಜದಲ್ಲಿ, ಅಂದರೆ ನಮಗೆ ಬಾಲಕಾರ್ಮಿಕತೆಯ ಬಗ್ಗೆ ಸ್ವಲ್ಪವೂ ಕಾಳಜಿ ಅಥವಾ ಪಾಪಪ್ರಜ್ಞೆ ಎನ್ನುವುದಿಲ್ಲ. ಬದಲಾಗಿ ಬಹಳಷ್ಟು ಜನರಲ್ಲಿ ಮಕ್ಕಳಿಂದ ದುಡಿಸಿಕೊಳ್ಳುವುದರಿಂದ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದೇವೆ ಎಂಬ ಭಾವನೆಯಿದೆ. ಇದರಿಂದಾಗಿ ಎರಡೂ ಕಡೆಗಳಿಂದ ಸಮಸ್ಯೆ ಇದ್ದು, ಬಗೆಹರಿಸಲು ಕಷ್ಟವಾಗಿದೆ. ಸರ್ಕಾರದ ಹಲವು ಇಲಾಖೆಗಳ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ, ಕಾರ್ಮಿಕ ಹಾಗೂ ಸಮಾಜ ಕಲ್ಯಾಣ ಇಲಾಖೆಗಳು)

ಸಂಯೋಜಿತ ಯತ್ನ ಹಾಗೂ ಸತತ ಪ್ರಯತ್ನದಿಂದ ಮಾತ್ರ ಸಮಸ್ಯೆ ಬಗೆಹರಿಸಲು ಸಾಧ್ಯ.

**2. ಭಾರತಕ್ಕೆ ಹೋಲಿಸಿದಲ್ಲಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಬಾಲಕಾರ್ಮಿಕತೆಯ ತೀವ್ರತೆ ಕಡಿಮೆ. ಭಾರತೀಯರಾಗಿ ನಾವು ಮಕ್ಕಳನ್ನು ದುಡಿಮೆಗೆ ಹೆಚ್ಚು ಉಪಯೋಗಿಸಿ-ಕೊಳ್ಳುತ್ತಿದ್ದೇವೆಂದು ನಿಮಗೆ ಅನಿಸುತ್ತದೆಯೇ?**

ಉ: ಹೌದು

**3. ಹಲವು ಸರ್ಕಾರಿ ನಿಬಂಧನೆಗಳ ನಡುವೆಯೂ, ಮಾಧ್ಯಮಗಳಲ್ಲಿ ತೋರಿಸುವಂತೆ ಮನೆಗೆಲಸದ ಮಕ್ಕಳ ಮೇಲಿನ ಶೋಷಣೆ ಇಂದಿಗೂ ನಡೆಯುತ್ತಿದೆ. ಬಾಲಕಾರ್ಮಿಕತೆಯ ವಿರುದ್ಧ ಮಾಲೀಕರಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಇದನ್ನು ತೊಡಗಿಸಬಹುದು ಎಂದು ನಿಮಗನಿಸುತ್ತದೆಯೇ? ಅಥವಾ ಕಠಿಣ ಕಾನೂನು ಕ್ರಮಗಳನ್ನು ಅಳವಡಿಸುವುದು ಸೂಕ್ತ ಎಂದು ಅನಿಸುತ್ತದೆಯೋ?**

ಉ: ಎರಡೂ ಪ್ರಯತ್ನಗಳು ಅಗತ್ಯ. ನೂತನ ಕಾನೂನುಗಳಿಗಿಂತ ಈಗಿರುವ ಕಾನೂನುಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ಸಮಸ್ಯೆ ಸುಧಾರಣೆಗೆ ಬಹಳಷ್ಟು ಸಹಾಯವಾಗಬಹುದು ಎಂಬುದು ನನ್ನ ಭಾವನೆ.

**4. ಸಮಾಜದಲ್ಲಿ ಬಾಲಕಾರ್ಮಿಕತೆಯ ಪಿಡುಗನ್ನು ನಿರ್ಮೂಲನೆ ಮಾಡುವುದನ್ನು ಕಡೆಗಣಿಸಲಾಗುತ್ತಿದೆ ಅಥವಾ ಕನಿಷ್ಠವಾಗಿ ಕಾಣಲಾಗುತ್ತಿದೆ ಎಂದು ನಿಮಗನಿಸುತ್ತದೆಯೇ?**

ಉ: ಹೌದು. ನಮ್ಮ ದಿನ ನಿತ್ಯದ ಜೀವನದಲ್ಲಿ ನಾವು ಎಷ್ಟು ಬಾರಿ ಬಾಲಕಾರ್ಮಿಕರನ್ನು ಕಾಣುವುದಿಲ್ಲ. ಗ್ಯಾರೇಜ್, ಹೋಟೆಲ್, ಅಂಗಡಿ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಎಲ್ಲೆಂದರಲ್ಲಿ ಬಾಲಕಾರ್ಮಿಕರು ಕಾಣಸಿಗುತ್ತಾರೆ. ಆದರೂ ನಾವೂ ಯೋಚಿಸುವ ಗೋಜಿಗೆ ಹೋಗುವುದಿಲ್ಲ.

**5. ಜೂನ್ 12 ರಂದು 'ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ' ಆಚರಿಸಲಾಗುತ್ತಿದೆ. ಉತ್ತಮ ನಾಗರೀಕರಾಗಿ ಸಮಾಜಕ್ಕೆ ನಿಮ್ಮ ಸಂದೇಶವೇನು?**

ಉ: ಯಾವುದಾದರೂ ಸಂದೇಶಕ್ಕೆ ನಿಜವಾದ ಅರ್ಥ ಬರುವುದು ನಮ್ಮಲ್ಲಿ ನಾವು 'ನಾಗರೀಕತೆ'ಯನ್ನು ಉಳಿಸಿಕೊಂಡಾಗ ಮಾತ್ರ. 'ಬಾಲ್ಯದ ಹಕ್ಕನ್ನು' ಮಕ್ಕಳಿಗೆ ನಾವು ನೀಡಲು ಸಾಧ್ಯವಾಗದಿರುವಾಗ ನಮ್ಮನ್ನು 'ನಾಗರೀಕರೆಂದು' ಹೇಗೆ ಕರೆದುಕೊಳ್ಳಲು ಸಾಧ್ಯ?

## ಓದುಗರ ಅನಿಸಿಕೆ

*ರಾಜ್ಯ ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರದ ವಿದ್ಯುನ್ಮಾನ ಪತ್ರಿಕೆ 'ಬಾಲವಾಣಿ'ಗೆ ಓದುಗರು ಹಾಗೂ ಸದಸ್ಯರಿಂದ ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ. ಹಲವರು ಕೇಂದ್ರದ ಪ್ರಯತ್ನಗಳನ್ನು ಕುರಿತು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಓದುಗರ ಪ್ರತಿಕ್ರಿಯೆ ಹಾಗೂ ಪ್ರಶಂಸೆಯನ್ನು ಸ್ವಾಗತಿಸುತ್ತಾ, ಪತ್ರಿಕೆಯ ಎಲ್ಲಾ ಸದಸ್ಯರುಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆಂದು ಕೋರುತ್ತಿದ್ದೇವೆ. 'ಬಾಲವಾಣಿ', ಕೇಂದ್ರದ ಅಂತರ್ಜಾಲ (ವೆಬ್‌ಸೈಟ್) ಹಾಗೂ ಪರಿಹಾರ ವಿನಿಮಯ (ಸಲ್ಯೂಷನ್ ಎಕ್ಸ್‌ಚೇಂಜ್)ಗಳ ಬಗ್ಗೆ ಸದಸ್ಯರುಗಳಿಂದ ಇ-ಮೇಲ್ ಮೂಲಕ ದೊರೆತಿರುವ ಕೆಲವು ಪ್ರತಿಕ್ರಿಯೆಗಳನ್ನು ನಾವು ಇಲ್ಲಿ ಹಂಚಿಕೊಳ್ಳುತ್ತಿದ್ದೇವೆ.*

ಬಾಲಕಾರ್ಮಿಕತೆ ಸಮಸ್ಯೆಗಳು, ಸರ್ಕಾರಿ ಕಾರ್ಯಕ್ರಮಗಳು ಹಾಗೂ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನೊಳಗೊಂಡ ಅಂತರ್ಜಾಲವನ್ನು ಸ್ಥಾಪಿಸುವಲ್ಲಿ ಕೆಲಸ ಮಾಡಿದ ರಾ.ಬಾ.ಸಂ.ಕೇಂದ್ರಕ್ಕೆ ಹಾಗೂ ಎಲ್ಲ ಸಿಬ್ಬಂದಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತಿದ್ದೇನೆ. ಈ ವೆಬ್‌ಸೈಟ್‌ನ ಸಹಾಯದಿಂದ ಅವಕಾಶ ವಂಚಿತ ಲಕ್ಷಾಂತರ ಮಕ್ಕಳಿಗಾಗಿ ದುಡಿಯುತ್ತಿರುವ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ ಬಹಳ ಸಹಾಯವಾಗುತ್ತದೆ ಎಂದು ನಂಬುತ್ತೇನೆ.
ಎಂ.ಮಾದಯ್ಯ
**madaiah.m@gmail.com**
**4/6/2010 10:24:55 ಏಖ**

ಸರ್ಕಾರದ ವತಿಯಿಂದ ಇಂತಹ ಒಂದು ಉತ್ತಮ ಯೋಜನೆ ಪ್ರಾರಂಭಿಸಿರುವುದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ರಾ.ಬಾ.ಕಾ.ಸಂ.ಕೇಂದ್ರದ ಚಟುವಟಿಕೆಗಳು ಇತರೆ ರಾಜ್ಯಗಳಿಗೆ ಮಾದರಿಯಾಗಲಿ ಎಂದು ಆಶಿಸುತ್ತೇನೆ.
ಸುರೇಶ್ ರಾವ್, ಸಿಆರ್‌ಎಸ್, ಗುಜರಾತ್
**suresh@crsgujarat.org**
**4/15/2010 9:56:25 PM**

ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಎಲ್ಲ ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಕೇಂದ್ರದ ಸ್ಥಾಪನೆ ಹಾಗೂ 'ಬಾಲವಾಣಿ'ಯ ಪ್ರಯತ್ನಗಳು 'ಸಾಕಾರಗೊಂಡ ಕನಸು' ಎಂದು ಭಾವಿಸಿದ್ದೇನೆ. ಅವಕಾಶ ವಂಚಿತ ಲಕ್ಷಾಂತರ ಮಕ್ಕಳಿಗೆ ಕೇಂದ್ರದ ಚಟುವಟಿಕೆಗಳಿಂದ ಉಪಯೋಗವಾಗಲಿ ಎಂದು ಆಶಿಸುತ್ತೇನೆ... **ALL the best**
ಶುಭಾ ಅರಸ್,
**mvshubhaurs@yahoo.com**
**4/30/2010 3:34:27 PM**

ಸರ್, ನಮಸ್ತೆ. 'ಬಾಲವಾಣಿ'ಗೆ ಸದಸ್ಯರಾಗಲು ನಮನ್ನು ಆಹ್ವಾನಿಸಿದ್ದಕ್ಕಾಗಿ ಧನ್ಯವಾಗಳು.
ಎಸ್. ಪ್ರಸನ್ನಕುಮಾರ್,
ಆಡಳಿತ ಅಧಿಕಾರಿ, ವಿಜ್ಞಾನ ಹಾಗೂ ಮಾನವೀಯ ಮೌಲ್ಯಗಳ ಕೇಂದ್ರ, ಗಾಂಧಿ ಭವನ, ಬೆಂಗಳೂರು,
**gandhicentre.bvb@gmail.com**
**4/3/2010 2:30:35 PM**

'ಬಾಲವಾಣಿ' ಮೊದಲ ಸಂಚಿಕೆಯನ್ನು ಓದಿ ಬಹಳ ಸಂತೋಷವಾಯಿತು. ಅವಕಾಶವಂಚಿತ ಮಕ್ಕಳ ಕಲ್ಯಾಣಕ್ಕಾಗಿ ಸ್ಥಾಪಿಸಲಾಗಿರುವ ರಾ.ಬಾ.ಕಾ.ಸಂ.ಕೇಂದ್ರಕ್ಕೆ ಹಾಗೂ ಅರ್ಥಪೂರ್ಣ ಚಟುವಟಿಕೆಗಳಿಗೆ ನನ್ನ ಅಭಿನಂದನೆಗಳು. 'ಬಾಲವಾಣಿ'ಯಲ್ಲಿ ಮೂಡಿ ಬಂದಿರುವ ಮುಖ್ಯ ಸುದ್ದಿಯೊಂದಿಗೆ ಎಲ್ಲ ಕಾಲಂಗಳು ಬಹಳ ಅರ್ಥಪೂರ್ಣವಾಗಿವೆ. ಆದರೆ ಪತ್ರಿಕೆಯಲ್ಲಿ ಉಪಯೋಗಿಸಲಾಗಿರುವ ಚಿತ್ರಗಳ ಗುಣಮಟ್ಟದ ಬಗ್ಗೆ ಗಮನ ಕೊಡುವುದು ಸೂಕ್ತ. ಕೇಂದ್ರ ಪ್ರಯತ್ನಗಳಿಗೆ ನನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾ, ಯಶಸ್ಸನ್ನು ಕೋರುತ್ತೇನೆ.
ಬಿ.ವಿ. ಸೂರ್ಯಪ್ರಕಾಶ್,
**suryarmgm@gmail.com**
**2/20/2010 4:33:25 PM**

ಜನರಲ್ಲಿ ಬಾಲಕಾರ್ಮಿಕ ಸಮಸ್ಯೆಯ ಅರಿವನ್ನು ಮೂಡಿಸಲು ಸ್ಥಾಪಿಸಲಾಗಿರುವ ರಾ.ಬಾ.ಸಂ.ಕೇಂದ್ರ ಸ್ಥಾಪನೆ ಹಾಗೂ ಸರ್ಕಾರದ ಪ್ರಯತ್ನಕ್ಕೆ ಅಭಿನಂದನೆಗಳು. 'ಬಾಲವಾಣಿ' ಮೊದಲನೆ ಸಂಚಿಕೆಯಲ್ಲಿ ಸಾಕಷ್ಟು ಅರ್ಥಪೂರ್ಣ ಹಾಗೂ ಉಪಯುಕ್ತ ಮಾಹಿತಿಯಿದೆ. ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಎಲ್ಲರಿಗೂ ಇದರಿಂದ ಉಪಯೋಗವಾಗಲಿ ಎಂದು ಆಶಿಸುತ್ತೇನೆ. 'ಧನ್ಯವಾದಗಳು'
ಗಣೇಶ್ ವಿ. ಐತಾಳ್,
**vgaithal@gmail.com**
**3/3/2010 11:56:03 AM**

ರಾ.ಬಾ.ಕಾ.ಸಂ.ಕೇಂದ್ರದಿಂದ ಹೊರತರುತ್ತಿರುವ 'ಬಾಲವಾಣಿ' ಬಹಳ ಉಪಯುಕ್ತ ಮಾಹಿತಿಯನ್ನೊಳಗೊಂಡ ಪತ್ರಿಕೆಯಾಗಿದೆ. ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಹಲವಾರು ಸ್ವಯಂಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಈ ರಾಜ್ಯದಲ್ಲಿದ್ದಾರೆ. ಅವರ ಸಾಧನೆಗಳನ್ನು ಬಿಂಬಿಸುವ 'ಬಾಲವಾಣಿ'ಯ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಕೇಂದ್ರ ಎಲ್ಲ ಸಿಬ್ಬಂದಿ ವರ್ಗಕ್ಕೆ ಶುಭ ಹಾರೈಸುತ್ತೇನೆ. ಕೇಂದ್ರದ ವೆಬ್‌ಸೈಟ್ ಬಹಳ ಅರ್ಥಪೂರ್ಣ ಹಾಗೂ ಉಪಯುಕ್ತ ಮಾಹಿತಿ ಉಳ್ಳದ್ದಾಗಿದೆ. ಈ ವೆಬ್‌ಸೈಟ್ ಬಗ್ಗೆ ನನ್ನ ಎಲ್ಲ ಸ್ನೇಹಿತರಿಗೂ ತಿಳಿಸುತ್ತೇನೆ. ಹಾಗೂ 'ಪರಿಹಾರ ವಿನಿಮಯ'ದ ಚಟುವಟಿಕೆಗಳಲ್ಲಿ ನಾನೂ ಭಾಗವಹಿಸಲು ಬಯಸುತ್ತೇನೆ.
ರೂಪಶ್ರೀ .ಎಸ್,
ಎಂ.ಎ. ವಿದ್ಯಾರ್ಥಿನಿ, ರಾಜೀವ್‌ಗಾಂಧಿ ನ್ಯಾಷನಲ್ ಇನ್ಸ್‌ಟಿಟ್ಯೂಷನ್ ಫಾರ್ ಯೂತ್ ಡೆವಲಪ್‌ಮೆಂಟ್, ಶ್ರೀಪೆರಂಬೂದುರ್, ತಮಿಳುನಾಡು.

# ಕಲಿಯುವ ಮನೆ: ಶಾಲೆಗಾಗಿ ಮಕ್ಕಳಲ್ಲ; ಇದು ಮಕ್ಕಳಿಗಾಗಿ ಶಾಲೆ

‘ಮಕ್ಳಿಗೆ ಸ್ಕೂಲು ಮನೇಲಲ್ವೇ?’ ಅಂತ ಹೇಳಿದ್ರು ಖ್ಯಾತ ನಾಟಕಕಾರ ದಿವಂಗತ ಟಿ.ಪಿ. ಕೈಲಾಸಂ. ಹೌದು! ಮನೆಯನ್ನೇ ಹೋಲುವ ಶಾಲೆಯೊಂದಿದೆ. ಮೈಸೂರು–ಹೆಚ್.ಡಿ.ಕೋಟೆ ರಸ್ತೆಯ ನಡುವೆ ಇರುವ ಹಳ್ಳಿ ಕೆಂಚಲಗೂಡು ಗ್ರಾಮದಲ್ಲೊಂದು ಮನೆ. ಅದು ಬರಿ ಮನೆಯಲ್ಲ ‘ಕಲಿಯುವ ಮನೆ’. ‘ಮಕ್ಕಳಿಗಾಗಿ ಶಾಲೆಯೇ ಹೊರತು ಶಾಲೆಗಾಗಿ ಮಕ್ಕಳಲ್ಲ’ ಎಂಬುದು ಕಲಿಯುವ ಮನೆಯ ಮೂಲಮಂತ್ರ. ಇದೊಂದು ಅಪರೂಪದ ಪರ್ಯಾಯ ಶಾಲೆ, ದಿವ್ಯ ದೀಪಾ ಚಾರಿಟಬಲ್ ಟ್ರಸ್ಟ್‌ನ ಕನಸಿನ ಕೂಸು.

ಒಂದೆಡೆ ಸರ್ಕಾರ ಹಾಗೂ ಸಮಾಜದಲ್ಲಿ ‘ಶಾಲೆಯಿಂದ ಹೊರಗುಳಿದಿರುವ ಮಕ್ಕಳ’ ಸಂಖ್ಯೆಯ ಹೆಚ್ಚಳ, ಹಾಗೂ ಅದರ ಬಗ್ಗೆ ತೆಗೆದುಕೊಳ್ಳಬೇಕಿರುವ ನಿರ್ಧಾರಗಳ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಮೈಸೂರಿನಲ್ಲಿರುವ ‘ಕಲಿಯುವ ಮನೆ’ ಎಂಬ ಪರ್ಯಾಯ ಶಾಲೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪುನರ್ವಸತಿಗೊಂಡ ಬಾಲಕಾರ್ಮಿಕ ಮಕ್ಕಳ ಯಶಸ್ಸಿನ ಆಚರಣೆಯ ಸಂತೋಷದಲ್ಲಿದೆ. ದಿವ್ಯ ದೀಪಾ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಸ್ಥಾಪಿತವಾಗಿರುವ ‘ಕಲಿಯುವ ಮನೆ’, ಅವಕಾಶವಂಚಿತ ಮಕ್ಕಳಿಗೆ, ಉಚಿತ ಶಿಕ್ಷಣ, ಊಟ, ವಸತಿ ಹಾಗೂ ರಕ್ಷಣೆ ಕೊಡುವಂತಹ ಶ್ಲಾಘನೀಯ ಸೇವೆ ಮಾಡುತ್ತಿದೆ. ಈ ಶಾಲೆ ಸ್ವಾಮಿ ವಿವೇಕಾನಂದ ಹಾಗೂ ಶ್ರೀ ಅರುಬಿಂದೋ–ರವರ ಆದರ್ಶಗಳನ್ನು ಆಧರಿಸಿ ಸ್ಥಾಪಿತವಾಗಿದೆ.

ಸಾಮಾಜಿಕ ಕಳಕಳಿ ಹೊಂದಿರುವ ಯುವಕ ಹಾಗೂ ಯುವತಿಯರ ಸ್ವಯಂಸೇವಕ ಗುಂಪು ‘ಕಲಿಯುವ ಮನೆ’ಯ ಹಾಗೂ ಇಲ್ಲಿನ ವಿದ್ಯಾರ್ಥಿಗಳ ಯಶಸ್ಸಿನ ಹಿಂದಿದೆ. ಅವಕಾಶ ವಂಚಿತ, ಗ್ರಾಮೀಣ, ಪೋಷಕರಿಲ್ಲದ, ಇದ್ದೂ ಅನಕ್ಷರಸ್ಥರಾಗಿರುವ, ಅರ್ಧಕ್ಕೆ ಶಾಲೆ ಬಿಟ್ಟವರ, ಬಾಲಕಾರ್ಮಿಕರಾಗಿದ್ದ, ಆರ್ಥಿಕವಾಗಿ ಹಿಂದುಳಿದವರ, ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳಿಗೆ ಇಲ್ಲಿ ಅವಕಾಶ.

ಬಾಲಬಂಧು

> “ ***‘ಕಲಿಯುವ ಮನೆ’, ಮೈಸೂರಿನ ಸಮೀಪದ ಕೆಂಚಲಗೂಡು ಗ್ರಾಮದಲ್ಲಿರುವ ಪ್ರಶಾಂತ ವಾತಾವರಣದಲ್ಲಿ ಸ್ಥಾಪಿತಗೊಂಡಿದೆ. ಶಾಲೆಯಿಂದ ಹಲವು ಕಾರಣಗಳಿಂದಾಗಿ ಹೊರಗುಳಿದಿರುವ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣವನ್ನು ಉಚಿತವಾಗಿ ನೀಡಲು ಸ್ಥಾಪಿತವಾಗಿದೆ.***

‘ಕಲಿಯುವ ಮನೆ’ಯ ಶಿಕ್ಷಣ ವ್ಯವಸ್ಥೆ ವಿಭಿನ್ನ. ಇಲ್ಲಿ ಯಾವುದು ಬಲವಂತವಿಲ್ಲ, ಯಾವ ಜಾತಿಯಿಂದ ಬಂದ ಮಗುವೆಂದು ಕೇಳುವುದಿಲ್ಲ, ಬೆತ್ತ ಹಿಡಿದು ಗದರಿಸುವ ಶಿಕ್ಷಕರಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಡೊನೇಶನ್ ಹಾವಳಿಯಿಲ್ಲ. ಶಿಸ್ತಿನ ಕಲಿಕೆಗಿಂತ, ಭಿನ್ನವಾದ ಬೋಧನಾ ಕ್ರಮ ಇಲ್ಲಿದೆ. ಮಕ್ಕಳಲ್ಲಿ ವ್ಯಕ್ತಿತ್ವ ಬೆಳವಣಿಗೆ, ಯೋಗ, ಚಿತ್ರಕಲೆ, ಕಂಪ್ಯೂಟರ್ ಹಾಗೂ ಇತರೆ ಕಲೆಗಳನ್ನು ಹೇಳಿಕೊಡಲಾಗುತ್ತದೆ. ಶಿಕ್ಷಣದ ಜೊತೆಗೆ ಮಕ್ಕಳಿಗೆ ಊಟ, ವಸತಿ ಉಚಿತವಾಗಿ ನೀಡಲಾಗುತ್ತಿದೆ,” ಎನ್ನುತ್ತಾರೆ ‘ಕಲಿಯುವ ಮನೆ’ಯ ರೂವಾರಿ ಶ್ರೀ ಅನಂತಕೃಷ್ಣ.

*ಇತರೆ ಶಾಲೆಗಳಿಗಿಂತ ‘ಕಲಿಯುವ ಮನೆ’ ಹೇಗೆ ಭಿನ್ನ ಎನ್ನುವ ಪ್ರಶ್ನೆಗೆ ಉತ್ತರಿಸುತ್ತಾ ಶ್ರೀ ಅನಂತಕೃಷ್ಣ ಹೀಗೆ ಹೇಳುತ್ತಾರೆ. “ದಿವ್ಯ ದೀಪಾ ಚಾರಿಟಬಲ್ ಟ್ರಸ್ಟ್‌ನ ಹಿಂದಿನ ಅನುಭವದಿಂದ, ಮಕ್ಕಳಿಗೆ ಆಸಕ್ತಿ ಇರುವ ವಿಷಯಗಳನ್ನು ಹೇಳಿಕೊಟ್ಟಲ್ಲಿ ನಿಧಾನವಾಗಿ ಮಗು ಕಲಿಯಲು ಆರಂಭಿಸುತ್ತದೆ ಎನ್ನುವುದನ್ನು ಕಂಡುಕೊಂಡೆವು. ಮುಖ್ಯವಾಹಿನಿ ಶಾಲೆಗಳಲ್ಲಿ ಬಲವಂತದ ಶಿಕ್ಷಣ ಹೇರಲಾಗುತ್ತದೆ. ಮಕ್ಕಳಿಗೆ ಆಸಕ್ತಿ ಇಲ್ಲದಿದ್ದರೂ ಕೆಲವು ಪಠ್ಯಕ್ರಮಗಳನ್ನು ಪಾಲಿಸಿ ಕಲಿಯಬೇಕಾಗುತ್ತದೆ. ಹಾಗೂ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾಗಿ, ಉತ್ತಮ ಅಂಕಗಳನ್ನು ಪಡೆಯುವಂತೆ ಒತ್ತಡ ಹೇರಲಾಗುತ್ತದೆ. ಕಡಿಮೆ ಅಂಕ ಪಡೆದ ಮಗು ಅಥವಾ ಅನುತ್ತೀರ್ಣವಾದ ಮಗುವನ್ನು ‘ದಡ್ಡ’ ಎಂದು ಕರೆಯಲಾಗುತ್ತದೆ. ಹೀಗಾಗಿ ‘ಮಕ್ಕಳಿಗಾಗಿ ಶಾಲೆ’ ಎಂಬ ಪರ್ಯಾಯ ಶಾಲೆಯನ್ನು ಸ್ಥಾಪಿಸುವುದು ಉತ್ತಮ ಎಂದೆನಿಸಿತು. ಅದರಲ್ಲೂ ಅವಕಾಶ ವಂಚಿತ, ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳಿಂದ ಬಂದ ಹಾಗೂ ಅಂಗವಿಕಲ ಮಕ್ಕಳಿಗೆ ಈ ರೀತಿಯ ಶಾಲೆಯ ಅಗತ್ಯ ತೀವ್ರವಾಗಿದೆ.”*

2005ನೇ ಇಸವಿಯಲ್ಲಿ ಸ್ಥಾಪಿತಗೊಂಡ ‘ಕಲಿಯುವ ಮನೆ’, ತನ್ನ ವಿಶಿಷ್ಟ ಸೇವೆಗಾಗಿ ‘ರೋಟರಿ ರಮ್ಯಾ ಅವಾರ್ಡ್’ ಅನ್ನು ಗಳಿಸಿದೆ. ಪ್ರಸ್ತುತ ಈ ‘ಕಲಿಯುವ ಮನೆ’ಯಲ್ಲಿ 42 ಮಕ್ಕಳು ಕಲಿಯುತ್ತಿದ್ದಾರೆ. ಅವರಲ್ಲಿ 22 ವಸತಿ ಸಹಿತ ವಿದ್ಯಾರ್ಥಿಗಳಾಗಿದ್ದು, ಉಳಿದವರು ‘ಡೇ ಸ್ಕಾಲರ್’ ಗಳಾಗಿದ್ದಾರೆ. ಈ ಶಾಲೆಯಲ್ಲಿ ಕಲಿಕೆ ಹಾಡು, ಕುಣಿತ, ಆಟ, ಕಥೆಗಳ ಮೂಲಕ ಹೇಳಿಕೊಡಲಾಗುತ್ತದೆ. ಈ ಸಂಪೂರ್ಣ




**ಮೈಸೂರಿನ ಕೆಂಚಲಗೂಡು ಗ್ರಾಮದ ಬಳಿಯಲ್ಲಿ ದಿವ್ಯ ದೀಪಾ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಅವಕಾಶವಂಚಿತ ಮಕ್ಕಳಿಗಾಗಿ ಸ್ಥಾಪಿತವಾಗಿರುವ ‘ಕಲಿಯುವ ಮನೆ’.**

ಅಭ್ಯಾಸಕ್ರಮವನ್ನು ಹಲವಾರು ಮೂಲಗಳಿಂದ ಸಂಗ್ರಹಿಸಿ ಅಳವಡಿಸಿಕೊಳ್ಳಲಾಗಿದೆ. ಇತರೆ ಮುಖ್ಯವಾಹಿನಿ ಶಾಲೆಗಳ ಮೌಲ್ಯಗಳನ್ನು ಹೊರಗಿಟ್ಟು, ಮಕ್ಕಳಲ್ಲಿ ಯಾವುದರ ಬಗ್ಗೆ ಆಸಕ್ತಿಯಿದೆಯೆಂದು ಗಮನಿಸಿ ಅದನ್ನು ಕಲಿಯಲು ಪ್ರೋತ್ಸಾಹಿಸಲಾಗುತ್ತದೆ. ಅಂತಮವಾಗಿ ಮಗುವು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಜ್ಜಾಗಿಸುವುದು 'ಕಲಿಯುವ ಮನೆ'ಯ ಉದ್ದೇಶ, ಎನ್ನುತ್ತಾರೆ ಅನಂತಕೃಷ್ಣ.

'ಅಣ್ಣ', 'ಅಕ್ಕ,' ಎಂದು ಸಂಬೊಧಿಸಿಕೊಳ್ಳುತ್ತಾ ಪ್ರೀತಿಯಿಂದ ಕಥೆ, ಹಾಡು, ಕಂಪ್ಯೂಟರ್, ಯೋಗ ಇತ್ಯಾದಿ ಹೇಳಿಕೊಡುವ ಸಿಬ್ಬಂದಿಯಿಂದಾಗಿ ಮಕ್ಕಳ ಆಸಕ್ತಿ ಸಾಮರ್ಥ್ಯಗಳಿಗನಗುಣವಾಗಿ ತರಬೇತಿ ನೀಡಲಾಗುತ್ತದೆ. ಇದರಿಂದ ಮಕ್ಕಳಿಗೆ ನೈತಿಕ ಬಲ ಸಿಕ್ಕು ಅವರಲ್ಲಿ ಆತ್ಮವಿಶ್ವಾಸ ಬೆಳೆಯಲು ಸಹಾಯವಾಗುತ್ತದೆ. ಪರಿಣಾಮವಾಗಿ ಈ ಬಾರಿ ಒಟ್ಟು ಆರು ಮಕ್ಕಳು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಮಕ್ಕಳಿಗೆ ಬೋಧಿಸುತ್ತಾರೆ. ಆರಂಭದಲ್ಲಿ ಚೆನ್ನಾಗಿ ಮಾತನಾಡುವುದನ್ನು ಕಲಿಸಿ ಅನಂತರ ಭಾಷೆಯ ವಿಸ್ತೃತ ವಿಷಯಗಳನ್ನು ತಿಳಿಸಿಕೊಡಲಾಗುತ್ತದೆ. 'ಕಲಿಯುವ ಮನೆ'ಯ ಮತ್ತೊಂದು ವಿಶೇಷವೆಂದರೆ ಇಬ್ಬರು ಜರ್ಮನ್ ಸ್ವಯಂ ಸೇವಕರು ಇಲ್ಲಿನ ವಿದ್ಯಾರ್ಥಿಗಳಿಗೆ ಓದು ಕಲಿಯಲು ಸಹಾಯಕರಾಗಿರುವುದು. ಕಂಪ್ಯೂಟರ್ ಎಂಜಿನಿಯರ್ಸ್, ಕಾಲೇಜು ವಿದ್ಯಾರ್ಥಿಗಳು, ಅನೇಕ ಶಿಕ್ಷಕರು ಸ್ವಪ್ರೇರಣೆಯಿಂದ ಈ 'ಮನೆ'ಯನ್ನು ತಮ್ಮದೆನ್ನುವಂತೆ ಭಾವಿಸಿ ಎಲ್ಲ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣ, ಆಟೋಟಗಳ ಜೊತೆಗೆ ಆರೋಗ್ಯ ತಪಾಸಣೆ ಕೂಡ ನೀಡಲಾಗುತ್ತಿದೆ. 'ಕಲಿಯುವ ಮನೆ'ಯಲ್ಲಿ ಮಕ್ಕಳು ವಾರದಲ್ಲಿ ಆರು ದಿನ, ಪ್ರತಿ ದಿನಕ್ಕೆ ಆರು ಗಂಟೆಗಳ ಕಾಲ ಕಲಿಯುತ್ತಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಅವರ ಆಸಕ್ತಿಯನ್ನು ಆಧರಿಸಿ, ಎಂಜಿನಿಯರಿಂಗ್, ಮೆಡಿಸಿನ್, ಆರ್ಟ್ಸ್, ಕಾಮರ್ಸ್, ಚಲನಚಿತ್ರ ನಿರ್ಮಾಣ, ಛಾಯಾಚಿತ್ರ ಕಲಿಕೆ, ಮುಂತಾದ ಕೋರ್ಸ್‌ಗಳಿಗೆ ದಾಖಲಿಸಲು ಪ್ರಯತ್ನಿಸಲಾಗುತ್ತದೆ. ಒಟ್ಟಿನಲ್ಲಿ ಪ್ರತಿ ಮಗುವಿನ ಆಸಕ್ತಿ ಹಾಗೂ ಆಸೆಯಂತೆ ಶಿಕ್ಷಣ ಕೊಡಿಸಿ ಉತ್ತಮ ಪ್ರಜೆಯನ್ನಾಗಿಸುವುದು 'ಕಲಿಯುವ ಮನೆ'ಯ ಉದ್ದೇಶವಾಗಿದೆ.



'ಕಲಿಯುವ ಮನೆ'ಯಲ್ಲಿ ಕಂಪ್ಯೂಟರ್ ಕಲಿಯುತ್ತಿರುವ ಮಕ್ಕಳು.

> **"'ಅಣ್ಣ', 'ಅಕ್ಕ, ಎಂದು ಸಂಬೊಧಿಸಿಕೊಳ್ಳುತ್ತಾ ಪ್ರೀತಿಯಿಂದ ಕಥೆ, ಹಾಡು, ಕಂಪ್ಯೂಟರ್, ಯೋಗ ಇತ್ಯಾದಿ ಹೇಳಿಕೊಡುವ ಸಿಬ್ಬಂದಿಯಿಂದಾಗಿ ಮಕ್ಕಳ ಆಸಕ್ತಿ ಸಾಮರ್ಥ್ಯಗಳಿಗನಗುಣವಾಗಿ ತರಬೇತಿ ನೀಡಲಾಗುತ್ತದೆ.**

'ಕೇರ್ ಆಫ್ ಫುಟ್‌ಪಾತ್ ಖ್ಯಾತಿಯ ಮಾಸ್ಟರ್ ಕಿಶನ್ ಶಾಲೆಗೆ ಬಂದು ಮಕ್ಕಳೊಂದಿಗೆ ಬೆರೆತು ನಲಿದಿದ್ದಾನೆ. ಸಹಾಯಹಸ್ತ ಚಾಚಿದ್ದಾನೆ. ವಿಶೇಷವೆಂದರೆ ಕೆಲವು ಮಕ್ಕಳು ಹಾಗೂ ಸ್ವಯಂ ಸೇವಕರು ಭಾರತದ ಹಿಂದಿನ ಜನಪ್ರಿಯ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ಭೇಟಿ ಮಾಡಿದ್ದಾರೆ. ಎಲ್ಲ ಚಟುವಟಿಕೆಗಳ ಹಿಂದಿನ ಪ್ರೇರಕ ಶಕ್ತಿ ಶ್ರೀ ಅನಂತಕುಮಾರ್ ದಂಪತಿಗಳು. ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಅನಂತಕುಮಾರ್ ಅವರು, ತಮ್ಮ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ತಮ್ಮ ಸಂಸಾರದೊಡನೆ 'ಕಲಿಯುವ ಮನೆ'ಯಲ್ಲಿ ನೆಲೆಸಿ ಮಕ್ಕಳಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಮಗನಿಗೂ ಈ ಶಾಲೆಯಲ್ಲಿ ಶಿಕ್ಷಣವನ್ನು ನೀಡುತ್ತಿರುವುದು ಗಮನಾರ್ಹ.

'ಕಲಿಯುವ ಮನೆ'ಯನ್ನು ಸಂಪರ್ಕಿಸಲು ಇಚ್ಛಿಸುವವರು ಫೋ: +91-9341369901/ 9886165220 ಅಥವಾ ಇ-ಮೇಲ್ *divyadeepa. trust@gmail.com; support.divyadeepa@gmail.com* ಮಾಡಬಹುದು.

## ಮಕ್ಕಳ ಬ್ಯಾಂಕ್

ಮಕ್ಕಳಲ್ಲಿ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಜ್ಞಾನ ಮೂಡಿಸಲು, ಆರ್ಥಿಕ ವಹಿವಾಟು ಅರ್ಥ ಮಾಡಿಸಲು, 'ಕಲಿಯುವ ಮನೆ'ಯಲ್ಲಿ ವಿಶೇಷವಾದ 'ಮಕ್ಕಳ ಬ್ಯಾಂಕ್'ವೊಂದನ್ನು ನಡೆಸಲಾಗುತ್ತಿದೆ.

ಇಲ್ಲಿನ ಮಕ್ಕಳಿಗೆ ಪ್ರತಿ ತಿಂಗಳು ಸ್ವಲ್ಪ ಹಣವನ್ನು (duplicate money) ನೀಡಲಾಗುತ್ತದೆ. ಈ ಹಣದಿಂದ ಮಕ್ಕಳು ಚಾಕೋಲೇಟ್, ಸೋಪ್ ಇತ್ಯಾದಿಗಳನ್ನು ಈ ಮಕ್ಕಳ ಬ್ಯಾಂಕ್‌ನಿಂದ ಪಡೆಯಬಹುದು. ಮಕ್ಕಳು ಬೇರೆ ಬೇರೆ ಕೆಲಸಗಳಲ್ಲಿ, ಅಂದರೆ ತರಕಾರಿ ಬೆಳೆಯುವುದು, ಇತ್ಯಾದಿ (ಶಾಲೆ ಸಮಯದ ನಂತರ) ತೊಡಗಿ ಹಣ ಗಳಿಸಲು ಅವಕಾಶ ಮಾಡಿಕೊಡಲಾಗಿದೆ. ಹೀಗೆ ಗಳಿಸಿದ ಹಣವನ್ನು ಮಗು 'ಮಕ್ಕಳ ಬ್ಯಾಂಕ್'ನಲ್ಲಿ ಜಮಾ ಮಾಡಿಕೊಳ್ಳಬಹುದು. ತಾವು ಗಳಿಸಿದ ಹಣವನ್ನು ಚೆಕ್‌ಗಳ ಮೂಲಕ ನೀಡಲಾಗುತ್ತದೆ. ಬ್ಯಾಂಕ್ ವ್ಯವಹಾರಕ್ಕಾಗಿ ನಿರ್ಮಿಸಲಾಗಿರುವ ಕೊಠಡಿಯೊಂದರಲ್ಲಿ ಕ್ಯಾಷ್ ಬಾಕ್ಸ್, ಲೆಡ್ಜರ್, ಚಲನ್ ಬುಕ್, (ಮಾದರಿಗಳು) ಮುಂತಾದ ಸಾಮಗ್ರಿಗಳನ್ನು ಇರಿಸಲಾಗಿದೆ. ಹಣದ ವ್ಯವಹಾರಕ್ಕಾಗಿ 'ಅಣಕು ನೋಟುಗಳನ್ನು' ಉಪಯೋಗಿಸಲಾಗುತದೆ. ಮಕ್ಕಳು ಈ ಹಣವನ್ನು ಉಪಯೋಗಿಸಿಕೊಂಡು ತಮಗೆ ಬೇಕಾದ ವಸ್ತುವನ್ನು ಕೊಂಡುಕೊಳ್ಳಬಹುದು. 'ಬ್ಯಾಂಕ್ ನಿರ್ವಾಹಕರಾಗಿ' ಒಂದೊಂದು ತಿಂಗಳು ಒಂದು ಮಗುವನ್ನು ಸರತಿಯಲ್ಲಿ ನೇಮಿಸಲಾಗುತ್ತದೆ. ಇಲ್ಲಿನ ಶಿಕ್ಷಕರು ಬ್ಯಾಂಕ್ ವ್ಯವಹಾರಗಳನ್ನು ಮಕ್ಕಳಿಗೆ ಹೇಳಿಕೊಡುವಲ್ಲಿ ನೆರವಾಗುತ್ತಾರೆ.

ಲೇಖನಕ್ಕೆ ಪೂರಕ ಮಾಹಿತಿ ನೀಡಿದ ಮೈಸೂರಿನ ಶ್ರೀ ಶ್ರೀಕಂಠ ಗುಂಡಪ್ಪ ರವರಿಗೆ ನಮ್ಮ ಕೃತಜ್ಞತೆಗಳು. –ಸಂ.

*ಮಕ್ಕಳ ಕಲ್ಯಾಣಕ್ಕಾಗಿ ನಿಷ್ಠೆಯಿಂದ ದುಡಿಯುತ್ತಿರುವ ಸಂಸ್ಥೆಗಳು ಅಥವಾ ವ್ಯಕ್ತಿಗಳ ಬಗ್ಗೆ ತಿಳಿದಿದ್ದಲ್ಲಿ ನಮಗೆ ತಿಳಿಯಪಡಿಸಬೇಕೆಂದು ನಮ್ಮ ಓದುಗರಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ. –ಸಂ.*

# ಕೆಲವರ ಬಾಲ್ಯವೇಕೆ ಹೀಗೆ?

***ಪ್ರತಿಯೊಂದು ವಿದ್ಯಾರ್ಥಿಯ ಬಾಳಲ್ಲಿ ಎಸ್‌ಎಸ್‌ಎಲ್‌ಸಿ ಒಂದು ಪ್ರಮುಖವಾದ ಘಟ್ಟ. 10ನೇ ತರಗತಿಯಲ್ಲಿ ಉತ್ತೀರ್ಣರಾಗುವುದೆಂದರೆ ಮಕ್ಕಳಿಗೆ ಹಾಗೂ ಪೋಷಕರಿಗೆ ಹಿರಿಮೆ. ಅದರಲ್ಲೂ ಹಿಂದೆಂದೋ ಶಾಲೆಬಿಟ್ಟು ಮತ್ತೆ ಕಲಿಯಲಾರಂಭಿಸಿ ಸಾಧಿಸುವುದು ಅತ್ಯಂತ ಶ್ಲಾಘನೀಯ. ಈ ಸಾಧನೆಯ ಪಟ್ಟಿಯಲ್ಲಿ ಮೈಸೂರಿನ ದಿವ್ಯ ದೀಪಾ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿರುವ ‘ಕಲಿಯುವ ಮನೆ’ಯಲ್ಲಿ ಕಲಿತ ಮೂರು ವಿದ್ಯಾರ್ಥಿಗಳ ಹೆಸರು ಗಮನಾರ್ಹ.***

ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾದ ‘ಕಲಿಯುವ ಮನೆ’ಯ ಬಿ.ಎಸ್. ಪ್ರಶಾಂತ್ ಕುಮಾರ್‌ನ ಸಂತೋಷಕ್ಕೆ ಪಾರವೇ ಇಲ್ಲ. ಕಾರಣ ತನಗೆ ಓದು ಕಲಿಯಲು ಸಹಾಯ ಮಾಡಿದ ‘ಕಲಿಯುವ ಮನೆ’ ಹಾಗೂ ಅಲ್ಲಿನ ಸಿಬ್ಬಂದಿ ವರ್ಗ. ಬಡ ರೈತ ಕುಟುಂಬದಲ್ಲಿ ಹುಟ್ಟಿದ ಪ್ರಶಾಂತ್ ಕುಮಾರ್, ಮಂಡ್ಯ ಜಿಲ್ಲೆಯ ಬೊಪ್ಪಸಂದ್ರ ಗ್ರಾಮದಲ್ಲಿ 1991ರಲ್ಲಿ ಜನಿಸಿದ. 6ನೇ ತರಗತಿಯ ಬಳಿಕ ಅನಿವಾರ್ಯ ಪರಿಸ್ಥಿಗ–ಳಲ್ಲಿ ಪ್ರಶಾಂತ್ ಶಾಲೆ ಬಿಡಬೇಕಾಯಿತು.



**ಬಿ.ಎಸ್. ಪ್ರಶಾಂತ್ ಕುಮಾರ್**

ಬಡತನದಿಂದಾಗಿ ಈ ಕುಟುಂಬ ಎಷ್ಟೋ ದಿನಗಳು ಒಂದು ಕೈಹಿಡಿ ಕಡ್ಲೆಪುರಿ ಹಾಗೂ ನೀರು ಕುಡಿದು ಜೀವನ ಸಾಗಿಸಿದ್ದುಂಟು. ಬಡತನದ ಬೇಗೆಯಲ್ಲಿ ಬೆಂದು ನೊಂದ ಕುಟುಂಬದ ಪರಿಸ್ಥಿತಿಯಿಂದಾಗಿ ಪ್ರಶಾಂತ್‌ಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಯಿತು ಹಾಗೂ ಸಂಪಾದಿಸುವ ಮಾರ್ಗ ಹುಡುಕುವುದು ಅನಿವಾರ್ಯವಾಯಿತು.

ಅನಿವಾರ್ಯ ಕಾರಣಗಳಿಂದಾಗಿ ಪ್ರಶಾಂತನ ತಾಯಿ, ಮಗನೊಂದಿಗೆ ಮನೆ ತೊರೆದು ಮೈಸೂರಿನ ಸಂಬಂಧಿಕರ ಮನೆಯೊಂದರಲ್ಲಿ ಆಶ್ರಯ ಪಡೆದರು. ಆಗ ಪ್ರಶಾಂತ್‌ಗೆ 11 ವರ್ಷ. ವೈದ್ಯರೊಬ್ಬರ ಮನೆಯಲ್ಲಿ ಈತ ಮನೆ ಕೆಲಸದವನಾಗಿ ದುಡಿಯಲಾರಂಭಿಸಿದ. ಈತನ ತಾಯಿ ಅಲ್ಲಿಯೇ ಒಂದು ಕಾರ್ಖಾನೆಯಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯಲಾರಂಭಿಸಿದರು. ಕಡಿಮೆ ಸಂಬಳಕ್ಕೆ ಕಸ ಗುಡಿಸುವುದು, ಬಟ್ಟೆ ಒಗೆಯುವುದು, ಸಾರಿಸುವ ಕೆಲಸಗಳನ್ನು ಪ್ರಶಾಂತ್ ಮಾಡಬೇಕಾಯಿತು. ಈ ಪರಿಸ್ಥಿತಿಯಲ್ಲಿ ಇವರು ತಂಗಿದ್ದ ಸಂಬಂಧಿಕರ ಮನೆಯಲ್ಲಿ ಕಿರುಕುಳ ಆರಂಭವಾಯಿತು. ತಾಯಿ–ಮಗ ದುಡಿದು ತರುತ್ತಿದ್ದುದರಲ್ಲಿ ಸಿಂಹಪಾಲನ್ನು ಅವರಿಗೆ ಕೊಡಬೇಕಾಗಿ ಬರುತ್ತಿತ್ತು. ಇದರಿಂದಾಗಿ ಬೇಸತ್ತ ಪ್ರಶಾಂತನ ತಾಯಿ, ಮಗನನ್ನು ಕರೆದುಕೊಂಡು ಬೇರೊಬ್ಬರ ಆಶ್ರಯ ಪಡೆದರು. ಪ್ರಶಾಂತ್‌ನನ್ನು ಹಾಸನದಲ್ಲಿ ಮನೆ ಕೆಲಸಕ್ಕೆ ಸೇರಿಸಲಾಯಿತು. ಅಲ್ಲಿ ಮೂರು ವರ್ಷಗಳು ಕೆಲಸ ಮಾಡಿದ ನಂತರ, ತಾಯಿಯೊಡನೆ ಇರಲು ಇಚ್ಛಿಸಿದ ಪ್ರಶಾಂತ್ ಮೈಸೂರಿಗೆ ಹಿಂದಿರುಗಿದ. ಮತ್ತೆ ಬಟ್ಟೆ ಅಂಗಡಿಯೊಂದರಲ್ಲಿ ಸಹಾಯಕನಾಗಿ ರೂ. 500 ಸಂಬಳಕ್ಕೆ ಸೇರಿದ. ಹಲವು ತಿಂಗಳುಗಳ ನಂತರ ಅಂಗಡಿ ಮಾಲೀಕ ಆತನನ್ನು ಊಟಿಗೆ ಕರೆದೊಯ್ದು ಹೋಟೆಲ್ ಒಂದರಲ್ಲಿ ದೂಡಿದ. ನಂತರ ಈತನನ್ನು ಕೊಯಮತ್ತೂರಿಗೆ ಕರೆದೊಯ್ಯಲಾಯಿತು. ಅಲ್ಲಿನ ಹೋಟೆಲ್ ಮಾಲೀಕ ಕನ್ನಡಿಗನಾಗಿದ್ದ. ಒಂದು ದಿನ ಕನ್ನಡ ದಿನಪತ್ರಿಕೆಯೊಂದರಲ್ಲಿ ‘ಕಲಿಯುವ ಮನೆ’ ಬಗ್ಗೆ ಪ್ರಕಟಗೊಂಡಿದ್ದ ಸುದ್ದಿಯನ್ನು ನೋಡಿ ಪ್ರಶಾಂತ್‌ಗೆ ತಿಳಿಸಿ ‘ಕಲಿಯುವ ಮನೆ’ಯನ್ನು ಸಂಪರ್ಕಿಸಿ ಮೈಸೂರಿನಲ್ಲಿ ಕೆಲಸ ಹುಡುಕುವಂತೆ ತಿಳಿಸಿದ.

ಮೈಸೂರಿಗೆ ಹಿಂದಿರುಗಿದ ಪ್ರಶಾಂತ್ ‘ಕಲಿಯುವ ಮನೆ’ ಸೇರಿ ಕಲಿಯಲಾರಂಭಿಸಿದ. ಆರಂಭದಲ್ಲಿ ಓದುವ ಆಸಕ್ತಿ ಇಲ್ಲದಿದ್ದರೂ, ‘ಕಲಿಯುವ ಮನೆ’ಯ ಪರಿಸರ ಹಾಗೂ ವಾತ್ಸಲ್ಯದಿಂದ ಕಲಿಸುವ ಸಿಬ್ಬಂದಿ ವರ್ಗದವರ ಪ್ರೋತ್ಸಾಹದಿಂದಾಗಿ ಬಹಳ ಬೇಗನೆ ಓದಿನಲ್ಲಿ ಆಸಕ್ತಿ ಬೆಳೆಸಿಕೊಂಡ. ಇತ್ತೀಚೆಗೆ ಕೊನೆಗೊಂಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಇತರರಿಗೆ ಮಾದರಿಯಾಗಿದ್ದಾನೆ. ‘ಕಲಿಯುವ ಮನೆ’ಯ ದಯೆಯಿಂದಾಗಿ ಮೈಸೂರಿನ ಕಾಲೇಜೊಂದರಲ್ಲಿ ಪಿಯುಸಿಗೆ ಸೇರಿದ್ದಾನೆ.

---

‘ಕಲಿಯುವ ಮನೆ’ಯಲ್ಲಿ ಕಲಿತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ‘ಸಂತೋಷ’ ಉತ್ಸಾಹದ ಚಿಲುಮೆಯಾಗಿದ್ದಾನೆ. ಕೆಂಚಲಗೂಡು ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ಸಂತೋಷ, ತಂದೆ–ತಾಯರ 4ನೇ ಮಗ. ಮೊದಲ ಮೂವರು ಹೆಣ್ಣು ಮಕ್ಕಳು. ಸಂತೋಷನ ಪೋಷಕರು ಎಂದಿಗೂ ಶಾಲೆಗೆ ಹೋಗಿಲ್ಲ. ಬಡತನ–ದಿಂದಾಗಿ ಕುಟುಂಬ ತೀವ್ರ ಸಂಕಷ್ಟ–ದಲ್ಲಿದ್ದರೂ, ಪೋಷಕರು ಸಂತೋಷನನ್ನು ಓದಿಸಲು ಆಸಕ್ತಿ ಹೊಂದಿದ್ದರು. ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಶಾಲೆಯಲ್ಲಿ ಕಲಿತ ಸಂತೋಷ, ಸಾಲುಹುಂಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ.



**ಸಂತೋಷ**

ಬಡತನದಿಂದಾಗಿ ನೊಂದ ಕುಟುಂಬದ ವಾತಾವರಣ, ಶಾಲೆಯಲ್ಲಿ ಬೈಯ್ಯುತ್ತಿದ್ದ ಶಿಕ್ಷಕರಿಂದಾಗಿ ಸಂತೋಷ ಓದಿನಲ್ಲಿ ಆಸಕ್ತಿ ಕಳೆದುಕೊಂಡ. ಆರನೇ ತರಗತಿಯಲ್ಲಿ ಓದುತ್ತಿದ್ದಾಗ ಶಾಲೆಯಿಂದ ಹೊರಬಿದ್ದ. ಮತ್ತೆ ಶಾಲೆಗೆ ಸೇರಿಸಲು ಯತ್ನಿಸಿದ ಪೋಷಕರ ಪ್ರಯತ್ನ ಫಲಿಸಲಿಲ್ಲ. ಸ್ನೇಹಿತರೊಂದಿಗೆ ಸಂತೋಷ ಕುರಿ, ದನ ಮೇಯಿಸಲು ಆರಂಭಿಸಿದ.

2007ರಲ್ಲಿ ಕೆಂಚಲಗೂಡಿನಲ್ಲಿ ಆರಂಭವಾದ ‘ಕಲಿಯುವ ಮನೆ’ಯ ಬಗ್ಗೆ ಅರಿತ ಪೋಷಕರು ಈತನನ್ನು ಇಲ್ಲಿಗೆ ಸೇರಿಸಿದರು. ಆರಂಭದಲ್ಲಿ ಕಲಿಯಲು ಆಸಕ್ತಿ ಇಲ್ಲದಿದ್ದರೂ, ‘ಕಲಿಯುವ ಮನೆಯ’ ವಿಶಿಷ್ಟ ಕಲಿಕೆ, ಸುಂದರ ವಾತಾವರಣದಿಂದಾಗಿ ಸಂತೋಷ ಬಹಳ ಬೇಗನೆ ಓದು–ಬರಹ ಕಲಿಯುವಲ್ಲಿ ಆಸಕ್ತಿ ಹೊಂದಿ ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾದ.

---

ಬಡತನದಿಂದಾಗಿ ಏಳನೇ ತರಗತಿಯ ನಂತರ ಮೆಳ್ಳಹಳ್ಳಿಯ ನಂಜುಂಡಸ್ವಾಮಿ ಶಾಲೆಯಿಂದ ಹೊರಗುಳಿದಿದ್ದ. ಕಡು ಬಡತನದ ಕುಟುಂಬದಲ್ಲಿ ಜನಿಸಿದ ನಂಜುಂಡಸ್ವಾಮಿಯ ತಾಯಿ ಅಕ್ಷರ ಕಲಿತಿದ್ದರು. ಕುಟುಂಬದ ಸದಸ್ಯರೆಲ್ಲರೂ ವ್ಯವಸಾಯದಲ್ಲಿ ತೊಡಗಿದ್ದರು. ತಮ್ಮ ಎರಡು ಎಕರೆ ಕೃಷಿಭೂಮಿಯಲ್ಲಿ ಬತ್ತ ಬೆಳೆದು ಜೀವನ ಸಾಗಿಸುತ್ತಿದ್ದರು. ನಂಜುಂಡ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ. ‘ನನಗೆ ಟೀಚರ್ ಹೇಳಿ ಕೊಡುವ ಪಾಠ ಎಳ್ಳಷ್ಟು ಅರ್ಥವಾಗುತ್ತಿರಲಿಲ್ಲ. ಆದರೂ ಅಪ್ಪನ ಭಯದಿಂದ ಶಾಲೆಗೆ ಹೋಗುತ್ತಿದ್ದೆ,’ ಎನ್ನುವ ನಂಜುಂಡ ‘ಕಲಿಯುವ ಮನೆ’ಗೆ ಸೇರಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣನಾಗಿದ್ದಾನೆ. ಐದನೇ ತರಗತಿಯಲ್ಲಿ ಶಾಲೆಯಿಂದ ಹೊರ ಬಂದು ತಂದೆಯ ಜೊತೆ ವ್ಯವಸಾಯ ಕೆಲಸದಲ್ಲಿ ನೆರವಾಗುತ್ತಿದ್ದ. ಕ್ರಮೇಣ, ಮೈಸೂರಿನ ಪೇಂಟ್ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ. ಪಟ್ಟಣದ ಜೀವನ, ಅಂಗಡಿಗೆ ಬರುವ ಗ್ರಾಹಕರ ಆಚಾರ–ವಿಚಾರ, ಉಡುಗೆ–ತೊಡುಗೆ ನೋಡಿ ಅತ್ಯಂತ ಪ್ರಭಾವಿತನಾಗಿ,



**ನಂಜುಂಡಸ್ವಾಮಿ**

ನಾನು ಅವರ ಹಾಗೆ ಓದಿ ದೊಡ್ಡ ಮನುಷ್ಯ ಎನಿಸಿಕೊಳ್ಳಬೇಕು ಎಂದು ಅಂದುಕೊಳ್ಳತೊಡಗಿದ. ನಂಜುಂಡಸ್ವಾಮಿಯ ಚಿಕ್ಕಪ್ಪ ಸ್ವಲ್ಪ ಮಟ್ಟಿಗೆ ಅಕ್ಷರಾಭ್ಯಾಸ ಮಾಡಿದ್ದ ಕಾರಣ ಅವರಲ್ಲಿ ತನ್ನ ಆಸೆಯನ್ನು ತೋಡಿಕೊಂಡ. ಚಿಕ್ಕಪ್ಪನ ಸಹಾಯದಿಂದ 'ಕಲಿಯುವ ಮನೆ'ಯ ದಾರಿ ಕಂಡುಕೊಂಡ ನಂಜುಂಡ ಬಹಳ ಬೇಗ ಓದಿನಲ್ಲಿ ಆಸಕ್ತಿ ವಹಿಸಿ ಅಕ್ಷರ ಕಲಿತ. ತನ್ನ ಶ್ರದ್ಧೆ, ಆಸಕ್ತಿಯಿಂದಾಗಿ ನಂಜುಂಡ 10ನೇ ತರಗತಿ ಉತ್ತೀರ್ಣನಾಗಿದ ಇತರೆ ಮಕ್ಕಳಿಗೆ ಮಾದರಿಯಾಗಿದ್ದಾನೆ.

**'ಬಾಲವಾಣಿ'ಯೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡ ಈ ಮೂವರು ಬಾಲಕರು 'ಕಲಿಯುವ ಮನೆಗೆ' ಹಾಗೂ ತಮ್ಮ ಗುರುಗಳಿಗೆ ಹಾಗೂ 'ಕಲಿಯುವ ಮನೆಗೆ' ಬರುವ ಎಲ್ಲ ಸ್ವಯಂಸೇವಕರಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ. ಶಾಲೆ ಬಿಟ್ಟು ಹಲವು ವರ್ಷಗಳ ಬಳಿಕ ಮತ್ತೆ ಕಲಿಯುವಲ್ಲಿ ಆಸಕ್ತಿ ತೋರಿದ ಅನುಭವದ ಬಗ್ಗೆ ವಿವರಿಸುತ್ತಾ, 'ಕಲಿಯುವ ಮನೆ'ಯ ಪ್ರಶಾಂತ ವಾತಾವರಣವೊಂದೇ ಕಲಿಯುವುದಕ್ಕೆ ಸಾಕಷ್ಟು ಸ್ಫೂರ್ತಿ ಕೊಡುತ್ತದೆ ಎನ್ನುತ್ತಾರೆ. ಈ ಮೂವರು ಬಾಲಕರು ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದು ಉತ್ತೀರ್ಣರಾಗಿರುವುದು ಮತ್ತೊಂದು ವಿಶಿಷ್ಟತೆ.**

**ಆಂಗ್ಲ ಭಾಷೆಯ ಕಲಿಕೆಯ ಬಗೆಗಿನ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, "ಇಲ್ಲಿನ ಶಿಕ್ಷಕರು ಅತ್ಯಂತ ಪ್ರೀತಿ–ವಿಶ್ವಾಸದಿಂದ ಮಾತನಾಡಿಸುತ್ತಾರೆ. ಇಲ್ಲಿಗೆ ಬಂದಾಗ ನಮಗೆ ಓದುವುದು ಬಹಳ ಕಷ್ಟ ಎಂದು ಅನಿಸುತ್ತಿತ್ತು. ಇಲ್ಲಿನ ಶಿಕ್ಷಕರು ಓದಿನಲ್ಲಿ ಹಿಂದಿದ್ದರೆ ಬಯ್ಯುವುದಿಲ್ಲ, ಹೀಯಾಳಿಸುವುದಿಲ್ಲ, ಮತ್ತಷ್ಟು ಪ್ರೋತ್ಸಾಹಿಸಿ ಕಲಿಯುವುದರಲ್ಲಿ ಆಸಕ್ತಿ ಮೂಡಿಸುತ್ತಾರೆ," ಎನ್ನುತ್ತಾರೆ. 'ಕಲಿಯುವ ಮನೆಗೆ' ಎಂಜಿನಿಯರಿಂಗ್ ಹಾಗೂ ಇತರೆ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು, ಪ್ರತಿಷ್ಠಿತ ಐಟಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಯುವಕ, ಯುವತಿಯರು ಸ್ವಯಂ ಸೇವಕರಾಗಿ ಪಾಠ ಹೇಳಿಕೊಡಲು ಬರುತ್ತಾರೆ. ಇವರೆಲ್ಲರೂ ನಮಗೆ ಸ್ಫೂರ್ತಿ ಎಂದು ಕೃತಜ್ಞತೆ ಅರ್ಪಿಸುವ ಈ ಬಾಲಕರು, 'ಕಲಿಯುವ ಮನೆ', 'ಶಾಲೆಗಾಗಿ ಮಕ್ಕಳಲ್ಲ, ಮಕ್ಕಳಿಗಾಗಿ ಇರುವ ಶಾಲೆ' ಎನ್ನುತ್ತಾರೆ.**

## ಮಾಧ್ಯಮ ನೋಟ


# ಮಕ್ಕಳ ಕಣ್ಣಿನ ಕ್ಯಾನ್ಸರ್ ಚಿಕಿತ್ಸೆಗೆ ಒಪ್ಪಂದ

**ವಿಜಯ ಕರ್ನಾಟಕ ಪತ್ರಿಕೆಯ 02.02.2010ರ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಸುದ್ದಿ.**

ವಿದೇಶ » 13





# ಇಂದಿನಿಂದ ಎಲ್ಲ ಮಕ್ಕಳಿಗೂ ಶಿಕ್ಷಣ ಕಡ್ಡಾಯ

**ಆರ್ಥಿಕ್ಕೇ ಶಾಲೆ ಬಿಟ್ಟ ಅಥವಾ ಶಾಲೆಯಿಂದ್ದೇ ಕಾಣದ 92 ಲಕ್ಷ ಮಕ್ಕಳಿಗೆ ಇನ್ನು ಶಿಕ್ಷಣ ಖಚಿತ. 6-14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸ್ಥಳೀಯ ಮತ್ತು ರಾಜ್ಯ ಆಡಳಿತ ಜತೆಯಾಗಿ ಕೆಲಸ ಮಾಡಲಿದೆ.**

**ವಿಜಯ ಕರ್ನಾಟಕದ 1.04.2010 ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನ.**

## ಸುದ್ದಿ ಸ್ವಾರಸ್ಯ

**ಸೌಲಭ್ಯವಂಚಿತ ಮಕ್ಕಳಿಗಾಗಿ ರೂ.5 ಲಕ್ಷ ನೀಡಿದ ‘ಗೋಲ್ಡನ್ ಸ್ಟಾರ್’**



ಕನ್ನಡ ಚಿತ್ರರಂಗದ ‘ಗೋಲ್ಡನ್ ಸ್ಟಾರ್’, ಹಾಗೂ ‘ಸನ್‌ಫೀಸ್ಟ್ 10ಕೆ ಮ್ಯಾರಥಾನ್’ನ ಕರ್ನಾಟಕದ ರಾಯಭಾರಿಯೂ ಆಗಿರುವ ‘ಗಣೇಶ್’, ಸೌಲಭ್ಯವಂಚಿತ ಮಕ್ಕಳ ಕಲ್ಯಾಣಕ್ಕಾಗಿ ರೂ.5 ಲಕ್ಷ ನೀಡುವುದರ ಮೂಲಕ ಚಿತ್ರರಸಿಕರಲ್ಲಿ ಮಾತ್ರವಲ್ಲದೆ, ಸಾಮಾಜಿಕ ಹಾಗೂ ಅಭಿವೃದ್ಧಿಗಾಗಿ ದುಡಿಯುತ್ತಿರುವ ಅನೇಕ ಮಂದಿಯ ಹೃದಯದಲ್ಲಿಯೂ ನೆಲೆಸುವಂತಾಗಿದ್ದಾರೆ. ಏಪ್ರಿಲ್ 17, 2010ರಂದು, ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನಗರದ ‘ಇಕ್ಷಾ’ ಎಂಬ, ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗೆ ರೂ. 5 ಲಕ್ಷದ ಚೆಕ್ ಅನ್ನು ನೀಡಿದರು. ‘ಇಕ್ಷಾ’ ಕಣ್ಣಿನ ಕ್ಯಾನ್ಸರ್‌ನಿಂದಾಗಿ ತೊಂದರೆ ಅನುಭವಿಸುತ್ತಿರುವ ಮಕ್ಕಳಿಗಾಗಿ ದುಡಿಯುತ್ತಿರುವ ಸಂಸ್ಥೆ. ಕಾರ್ಯಕ್ರಮದಲ್ಲಿ ‘ಗೋಲ್ಡನ್ ಸ್ಟಾರ್’ ಮಾತನಾಡುತ್ತಾ, ಸಮಾಜ ನನಗೆ ಎಲ್ಲವನ್ನೂ ಕೊಟ್ಟಿದೆ, ಹಾಗೆಯೇ ನಾನು ಸಾಧ್ಯವಾದಷ್ಟೂ ಸಮಾಜಕ್ಕೆ ಈ ಮೂಲಕ ಹಿಂದಿರುಗಿಸುತ್ತೇನೆ," ಎಂದರು. ಈ ಮೂಲಕ ಜನರಿಗೆ ನೆರವಾಗಲು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ನನಗೆ ಈ ರೀತಿ ನೆರವು ನೀಡುವಲ್ಲಿ ಅತ್ಯಂತ ಸಂತಸವಾಗುತ್ತದೆ, ಎಂದರು.

## ಇಲ್ಲೊಮ್ಮೆ ನೋಡಿ ಪ್ಲೀಜ್!



ಬೆಂಗಳೂರಿನ ‘ಅಪ್ಸಾ ಸ್ವಯಂಸೇವಾ ಸಂಸ್ಥೆ ನಡೆಸುತ್ತಿರುವ ಎನ್‌ಸಿಎಲ್‌ಪಿ ಶಾಲೆಯಲ್ಲಿ ಕಲಿಯುತ್ತಿರುವ ಬಾಲಕ ಮಂಜುನಾಥ್‌ನ ಕೈಚಳಕದಲ್ಲಿ ಮೂಡಿರುವ ಚಿತ್ರಕಲೆ.

## ಸಂಕ್ಷಿಪ್ತ ಸುದ್ದಿ

- ಮೇ ೧೧, ೨೦೧೦ರಂದು ಆರಂಭಗೊಂಡ ಮೂರು ದಿನಗಳ, ‘ದಿ ಹೇಗ್ ಗ್ಲೋಬಲ್ ಚೈಲ್ಡ್ ಲೇಬರ್ ಕಾನ್ಫರೆನ್ಸ್’ ಉದ್ಘಾಟನೆಯ ದಿನದಂದು, ‘ಬಾಲಕಾರ್ಮಿಕತೆಗೆ ಒಳಗಾಗುವ ಮಕ್ಕಳನ್ನು ಗುರುತಿಸಲು ನೂತನ ಪ್ರಯತ್ನ ಹಾಗೂ ಹೆಚ್ಚಿನ ಅನುದಾನ ಬೇಕಿದೆ’ ಎಂದು ಯುನಿಸೆಫ್ ತಿಳಿಸಿದೆ. ನಾಳಿನ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಇಂದು ಹೆಚ್ಚು ಪರಿಣಾಮಕಾರಿಯಾಗಬಲ್ಲಂತಹ ಪರಿಹಾರಗಳನ್ನು ಕಂಡುಕೊಳ್ಳಲು ಹೆಚ್ಚಿನ ಪ್ರಯತ್ನ ಬೇಕಿದೆ ಎಂದು ಹೇಳಿದೆ. ಎಲ್ಲ ಮಕ್ಕಳಿಗೂ ತಲುಪುವಂತಹ ಉತ್ತಮ ಶಿಕ್ಷಣ, ಕುಟುಂಬಗಳ ಸುಧಾರಣೆಗಾಗಿ ನೆರವಾಗುವ ಕಾರ್ಯಕ್ರಮಗಳು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ನೆರವಾಗುವಂತಹ ವಾತಾವರಣ ಮೂಡಿಸುವುದಕ್ಕಾಗಿ ಹೆಚ್ಚು ಸಮಯ ಹಾಗೂ ಅನುದಾನವನ್ನು ಮೀಸಲಿಡಲು, ಎಲ್ಲ ಸರ್ಕಾರಗಳು ಹಾಗೂ ದಾನಿಗಳನ್ನು ಕೋರಿದೆ.

- ಬೆಂಗಳೂರಿನ ‘ಬಾರ್ನ್‌ಫ್ರೀ ಆರ್ಟ್ ಸ್ಕೂಲ್’, ಸ್ವಯಂಸೇವಾ ಸಂಸ್ಥೆಯು ಬೀದಿ ಮಕ್ಕಳನ್ನು ಆಧರಿಸಿದ ಕಥಾವಸ್ತುವನ್ನು ಹೊಂದಿರುವ ‘ಆನಂದ: ಆನ್ ಓಡ್ ಟು ಜಾಯ್’, ಎಂಬ ಚಲನಚಿತ್ರವನ್ನು ನಿರ್ಮಿಸುತ್ತಿದೆ. ಈ ಚಿತ್ರವು ‘ಬೀದಿ ಮಕ್ಕಳ’, ಅಂದರೆ ಜೊತೆಯಿಲ್ಲದ ಮಕ್ಕಳ ಅನಿಸಿಕೆ, ಆಕಾಂಕ್ಷೆ, ಬುದ್ಧಿಶಕ್ತಿ, ಕೌಶಲ್ಯಗಳನ್ನು ಬಿಂಬಿಸುತ್ತದೆ, ಎನ್ನುತ್ತಾರೆ ಚಿತ್ರದ ನಿರ್ದೇಶಕ ಹಾಗೂ ‘ಬಾರ್ನ್‌ಫ್ರೀ ಆರ್ಟ್ ಸ್ಕೂಲ್’ನ ಮುಖ್ಯಸ್ಥ ಶ್ರೀ ಜಾನ್ ದೇವರಾಜ್. ಈ ಚಿತ್ರದಲ್ಲಿ ಸುಮಾರು ೩೦೦ ಮಕ್ಕಳು ಪಾತ್ರ ವಹಿಸಲಿದ್ದು, ಅದರಲ್ಲಿ ೨೦ ಮಕ್ಕಳು ‘ಬಾರ್ನ್‌ಫ್ರೀ....’ ಮಕ್ಕಳು. ಇನ್ನೂ ನಿರ್ಮಾಣ ಪೂರ್ವಾವಸ್ಥೆಯಲ್ಲಿರುವ ಈ ಚಿತ್ರಕ್ಕಾಗಿ ಆರ್ಥಿಕ ಸಹಾಯವನ್ನು ಕೋರಲಾಗಿದೆ. ಸಹಾಯ ಒದಗಿಸಲು ಇಚ್ಛಿಸುವವರು ಚೆಕ್‌ಗಳನ್ನು ‘ಇಂಡಿಯಾ ಟು ದ ಆರ್ಟಿಸ್ಟ್ಸ್ ಯುನೈಟೆಡ್,’ ಅಥವಾ ‘ಗೊಂಡ್ವಾನಲ್ಯಾಂಡ್ ಫೌಂಡೇಷನ್’ ಹೆಸರಲ್ಲಿ ಪಡೆದು, ನಂ. ೨೧, ೨ನೇ ತಿರುವು, ಬಿ.ಎಚ್.ಲೇಔಟ್, ೩ನೇ ಬ್ಲಾಕ್, ಈಸ್ಟ್ ಜಯನಗರ, ಬೆಂಗಳೂರು-೧೧ಕ್ಕೆ ಕಳುಹಿಸುವುದು. ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ johndevaraj@gmail.com ಅಥವಾ 98863-06366 ಅನ್ನು ಸಂಪರ್ಕಿಸುವುದು.

- ಮಕ್ಕಳಲ್ಲಿ ಅಪೌಷ್ಟಿಕತೆ ಭಾರತಕ್ಕೆ ದೊಡ್ಡ ಸವಾಲನ್ನೇ ಒಡ್ಡಿದೆ. ಅಧ್ಯಯನಗಳ ಪ್ರಕಾರ ದೇಶದ ಒಟ್ಟು ಮಕ್ಕಳ ಜನಸಂಖ್ಯೆಯ ಶೇ. ೫೦ರಷ್ಟು ಮಕ್ಕಳು ಅಪೌಷ್ಠಿಕತೆಗೆ ಸಂಬಂಧಿಸಿದ ಖಾಯಿಲೆಗಳಿಂದ ಸಾಯುತ್ತಿದ್ದಾರೆ. ದೇಶದಲ್ಲಿ ಉಂಟಾಗುತ್ತಿರುವ ಈ ಅನಾಹುತದ ಬಗ್ಗೆ ಕಾಳಜಿ ಇರುವ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯ ಸಮಸ್ಯೆಗೆ ಸರಿಯಾದ ಪರಹಾರ ಹುಡುಕಿ ಬಗೆಹರಿಸಲು, ಸಮೀಕ್ಷೆ ಕೈಗೊಂಡು ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳನ್ನು ಗುರುತಿಸಲು ಆದೇಶಿಸಿದೆ.

# ಬಾಲಕಾರ್ಮಿಕತೆಯ ನಿರ್ಮೂಲನೆ ಪ್ರಯತ್ನ ೨೦೦೮-೨೦೦೯

**ಐಪಿಇಸಿ ಪ್ರಗತಿ ಮತ್ತು ಮುಂದಿನ ಆದ್ಯತೆಗಳು**

2008–2009 ನೇ ವರ್ಷವು ಮನುಕುಲಕ್ಕೆ ವಿಕ್ಷೇಪದ ಅವಧಿಯಾಗಿತ್ತು. 2008ರಲ್ಲಿ ವಿಶ್ವ ಆಹಾರ ಕ್ಷಾಮದಿಂದ ಪ್ರಪಂಚದ ನಾನಾ ಕಡೆ ಜನರು ತತ್ತರಿಸಿದರೆ, ಮತ್ತೊಂದೆಡೆ ವಿಶ್ವ ಜಾಗತಿಕ ಆರ್ಥಿಕ ಕುಸಿತ ಜನರನ್ನು ಮತ್ತಷ್ಟು ಕಂಗಾಲನ್ನಾಗಿಸಿತು. ಇದರಿಂದಾಗಿ ನಾನಾ ದೇಶಗಳ ಆರ್ಥಿಕ ಪರಿಸ್ಥಿತಿ ಶೋಚನಿಯವಾಗಿದ್ದಲ್ಲದೆ ಲಕ್ಷಾಂತರ ಜನರು ಕೆಲಸ ಕಳೆದುಕೊಂಡು ಬೀದಿ ಪಾಲಾದರು. ಆರ್ಥಿಕ ಕುಸಿತದಿಂದಾಗಿ ಪ್ರಪಂಚದಲ್ಲಿ

ಭಾರತವೂ ಸೇರಿದಂತೆ ಅನೇಕ ದೇಶಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಯ್ತು. ಇದರ ಜೊತೆಗೆ 2008ರ ಸಿಚುವಾನ್ ಭೂಕಂಪ ಮತ್ತು ಇತ್ತೀಚೆಗಷ್ಟೆ ನಡೆದ ಹೈಟಿ ಭೂಕಂಪಗಳಲ್ಲಿ ಸಾವಿರಾರು ಜನ ಪ್ರಾಣ ತೆತ್ತರಲ್ಲದೇ ಸಾವಿರಾರು ಕೋಟಿಗಳಷ್ಟು ಆಸ್ತಿ ಪಾಸ್ತಿ ನಷ್ಟವಾಯಿತು. ಇದರಿಂದಾಗಿ ಪ್ರಕೃತಿ ವಿಕೋಪಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಿರುವ ಅಂಶ ಎಲ್ಲ ದೇಶಗಳಿಗೂ ಅನಿವಾರ್ಯವಾಗಿದೆ. ಈ ಅಂಶವು ಬಾಲಕಾರ್ಮಿಕತೆ ನಿರ್ಮೂಲನೆಯ ವಿರುದ್ಧ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೆಗೆದುಕೊಳ್ಳುವ ನಿರ್ಣಯಗಳಲ್ಲಿ ಶಾಶ್ವತ ಹಾಗೂ ಕಡ್ಡಾಯವಾಗಿರಬೇಕಾಗಿದೆ.

ಬಾಲಕಾರ್ಮಿಕತೆ ಜಾಗತಿಕ ಮಟ್ಟದಲ್ಲಿ ಅತ್ಯಂತ ಗಂಭೀರ ಸಮಸ್ಯೆಯಾಗಿ ಮುಂದುವರೆದಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್ಒ), 'ನಿಕೃಷ್ಟವೆನಿಸುವ ಬಾಲಕಾರ್ಮಿಕ ಪದ್ಧತಿಯ ಸಮಾವೇಶ ನಂ. 182 ಸಾರ್ವಜನಿಕ ಮನ್ನಣೆ' ಪಡೆಯುವತ್ತ ಸಾಗಿದೆ. ಇದೇ ರೀತಿ ಕನಿಷ್ಠ ಪ್ರಾಯದ ಸಮಾವೇಶ ನಂ. 138 ಕೂಡ ಐಎಲ್ಒದ ಸಾರ್ವಜನಿಕ ಮನ್ನಣೆ ಪಡೆಯುವ ಸಮಾವೇಶಗಳ ಪಟ್ಟಿಯಲ್ಲಿದೆ. 2008ರ ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆ, ಬಾಲಕಾರ್ಮಿಕತೆ ನಿರ್ಮೂಲನೆಯನ್ನು ಗುರಿಯಾಗಿರಿಸಿಕೊಂಡ ಮಕ್ಕಳ ಹಕ್ಕುಗಳ ಮಹತ್ತರವಾದ ನಿರ್ಣಯವನ್ನು ಅನುಸರಿಸಿತು. 2009ರಲ್ಲಿ ಸಂಯುಕ್ತ ರಾಷ್ಟ್ರಗಳ ಮುಖ್ಯ ಕಾರ್ಯದರ್ಶಿಗಳು ಪ್ರಕಟಿಸಿದ ವರದಿಯು ಬಾಲಕಾರ್ಮಿಕತೆಯನ್ನು ಕುರಿತ ಮಕ್ಕಳ ಹಕ್ಕುಗಳ ನಿರ್ಣಯವನ್ನು ಎತ್ತಿಹಿಡಿಯಿತು. ಬಾಲಕಾರ್ಮಿಕತೆಯ ನಿರ್ಮೂಲನೆಗಾಗಿ ಜಾಗತಿಕ ಸಮಾವೇಶವೊಂದು ಇದೇ ವರ್ಷದ ಮೇ ತಿಂಗಳಿನಲ್ಲಿ ನೆದರ್‌ಲ್ಯಾಂಡ್‌ನಲ್ಲಿ ನಡೆಯಿತು. ಐಎಲ್ಒದ ವತಿಯಿಂದ, ಜಾಗತಿಕ ಮಟ್ಟದಲ್ಲಿ ಬಾಲಕಾರ್ಮಿಕತೆಯ ಈಗಿನ ಪರಿಸ್ಥಿತಿಯ ಬಗೆಗಿನ ವರದಿಯನ್ನು ಬಿಡುಗಡೆ ಮಾಡಿದೆ.

ಈ ಎಲ್ಲ ಬೆಳವಣಿಗೆಗಳು ಹಾಗೂ ವರದಿಗಳ ಪ್ರಕಾರ ಬಾಲಕಾರ್ಮಿಕತೆಯು ಬಡತನ ಮುಂದುವರೆಸುವುದಲ್ಲದೆ, ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ ಎಂಬುದನ್ನು ಖಾತ್ರಿಪಡಿಸುತ್ತದೆ. ಹೀಗಾಗಿ ಬಾಲಕಾರ್ಮಿಕತೆಯನ್ನು ನಿರ್ಮೂಲನೆ–ಗೊಳಿಸುವುದು ಸಹಸ್ರಮಾನದ ಅಭಿವೃದ್ಧಿಗಳ ಪಟ್ಟಿಯಲ್ಲಿ ಅಗ್ರಸ್ಥಾನ ನೀಡುವುದಕ್ಕೆ ಸೂಚಿಸುತ್ತದೆ. ಜಾಗತಿಕ ಮಟ್ಟದಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆಗಾಗಿ, 'ಉತ್ತಮ ಶಿಕ್ಷಣ ಹಾಗೂ ಉದ್ಯೋಗಾವಕಾಶ, ಹಣ ಸಹಾಯ,' ಇವೇ ಮುಂತಾದ ಅಂಶಗಳ ಅನುಷ್ಠಾನದಿಂದ ಸಾಧ್ಯ ಎನ್ನುವುದನ್ನು ಸರ್ವಾನುಮತದ ಅಭಿಪ್ರಾಯವಾಗಿದೆ.

2008–2009 ವರ್ಷಗಳು ನಡುವೆ ಅನೇಕ ಮುಖ್ಯ ಚಟುವಟಿಕೆಗಳಿಗೆ ಸಾಕ್ಷಿಯಾಯಿತು. 2008ರಲ್ಲಿ ನಡೆದ ಅಂತಾರಾಷ್ಟ್ರೀಯ ಸಾಂಖ್ಯಿಕ ಕಾರ್ಮಿಕರ ಸಮಾವೇಶದಲ್ಲಿ, ಬಾಲಕಾರ್ಮಿಕತೆಯ ಸಮಸ್ಯೆಯನ್ನು ಅಳೆಯುವ ಅಂತಾರಾಷ್ಟ್ರೀಯ ಸಾಂಖ್ಯಿಕ ಪ್ರಮಾಣವನ್ನು ಅನುಸರಿಸಿತು. ಇದರಿಂದ ಬಾಲಕಾರ್ಮಿಕತೆಯ ಸಾಂಖ್ಯಿಕ ಹೋಲಿಕೆ–ಗಳನ್ನು ಮಾಡುವುದಕ್ಕೆ ಸಹಾಯವಾಗುತ್ತದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳ ಕುರಿತ, ಪ್ರಪಂಚದ ಮೂರನೇ ಅಧಿವೇಶನ ನವೆಂಬರ್ 2008ರಲ್ಲಿ ಬ್ರಜಿಲ್‌ನ, ರಿಯೋ ಡಿ ಜನೈರೋದಲ್ಲಿ ಜರುಗಿತು. ಈ ಸಮಾವೇಶವನ್ನು ಐಪಿಇಸಿ ಸಮರ್ಥಿಸಿತು. ಅಧಿವೇಶನದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ 2016ರ ವೇಳೆಗೆ ನಿಕೃಷ್ಟ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸುವ ಅಂತಾರಾಷ್ಟ್ರೀಯ ಆಶಯದ ಬಗ್ಗೆ ಪ್ರಾಮುಖ್ಯತೆ ನೀಡಿತು.

ಪೂರ್ಣ ಮಾಹಿತಿಗಾಗಿ
**(http://www.ilo.org/ipec/)**
**ಅನ್ನು ಭೇಟಿಯಾಗಿ**

# ಸ್ವಯಂ ಸೇವಾ ಸಂಸ್ಥೆಗಳಿಗೆ ಲಭ್ಯವಿರುವ ಅವಕಾಶಗಳು

**'ದಿ ಏಷ್ಯಾ–ಪೆಸಿಫಿಕ್ ಬ್ರಾಡ್‌ಕಾಸ್ಟಿಂಗ್ ಯೂನಿಯನ್ (ಎಬಿಯು), ಕೇಬಲ್ ಅಂಡ್ ಸ್ಯಾಟಲೈಟ್ ಬ್ರಾಡ್‌ಕ್ಯಾಸ್ಟಿಂಗ್ ಅಸೋಸಿಯೇಷನ್ ಆಫ್ ಏಷ್ಯಾ (ಸಿಎಎಸ್‌ಬಿಎಎ) ಹಾಗೂ ಯುನಿಸೆಫ್ ಸಹಯೋಗದಲ್ಲಿ** '2010ರ ಏಷ್ಯಾ–ಪೆಸಿಫಿಕ್ ಫಾರ್ ಟೆಲಿವಿಷನ್ ಅವಾರ್ಡ್' ಅನ್ನು ನೀಡುತ್ತಿದೆ. ಈ ಪ್ರಶಸ್ತಿಯನ್ನು ಏಷ್ಯಾ–ಪೆಸಿಫಿಕ್ ಪ್ರಾಂತ್ಯದಲ್ಲಿ 'ಮಕ್ಕಳ ಹಕ್ಕುಗಳ ಬಗ್ಗೆ ದೂರದರ್ಶನಕ್ಕಾಗಿ ನಿರ್ಮಿಸಲಾದ ಅತ್ಯುತ್ತಮ ಕಾರ್ಯಕ್ರಮಗಳಿಗೆ' ನೀಡಲಾಗುತ್ತದೆ. ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವ ಉತ್ತಮ ಗುಣಮಟ್ಟದ ಕಾರ್ಯಕ್ರಮವಾಗಿರಬೇಕು ಹಾಗೂ ಜೂನ್ 2009ರಿಂದ ಮೇ 2010ರೊಳಗೆ ನಿರ್ಮಿಸಲಾದ ಕಾರ್ಯ–ಕ್ರಮಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಜೂ. 25, 2010.

ಅಮೆರಿಕಾ ರಾಷ್ಟ್ರದಿಂದ, 'ಗುಲಾಮಗಿರಿಯಿಂದ ಮುಕ್ತಿಗಾಗಿ' ನೀಡಲಾಗುವ **'ದಿ ಫ್ರೀಡಮ್ ಅವಾರ್ಡ್ಸ್'**ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯನ್ನು 'ಮಾನವ ಸಾಗಣೆ ಹಾಗೂ ಗುಲಾಮಗಿರಿ'ಯ ಮುಕ್ತಿಗಾಗಿ ದುಡಿಯುತ್ತಿರುವ ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಪ್ರಶಸ್ತಿಗಳಿಗಾಗಿ ಗುರುತಿಸಲಾಗುವ ವ್ಯಕ್ತಿಗಳನ್ನು ಅಮೆರಿಕಾದಲ್ಲಿ ಗೌರವಿಸಲಾಗುವುದು. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 1, 2010.

ಹೆಚ್ಚಿನ ಮಾಹಿತಿಗಾಗಿ
**editorsrc@yahoo.com**ಗೆ
ಇ–ಮೇಲ್ ಮಾಡಿ

**'ದಿ ಯುನೈಟೆಡ್ ಸ್ಟೇಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಪೀಸ್ (ಯುಎಸ್‌ಐಪಿ)'** ಸ್ವಯಂಸೇವಾ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಅಥವಾ ನಾಗರೀಕ ಸಂಸ್ಥೆಗಳಿಂದ ಅನುಷ್ಠಾನಗೊಂಡಿರುವ ಶಾಂತಿ ಹಾಗೂ ಸೌಹಾರ್ದ ಯೋಜನೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ 2010ರ ವಾರ್ಷಿಕ ಅನುದಾನವನ್ನು ನೀಡುತ್ತಿದೆ. ಈ ವರ್ಷದ ಅನುದಾನದ ಬಿಡುಗಡೆಗಾಗಿ ಭಾರತವೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಶಾಂತಿ, ಸೌಹಾರ್ದಕ್ಕಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ಮುಖ್ಯಪಾತ್ರ ವಹಿಸಿರುವ ವ್ಯಕ್ತಿಗಳೂ ಸಹ ಅರ್ಜಿ ಸಲ್ಲಿಸಲು ಅರ್ಹರು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಕ್ಟೋಬರ್ 1, 2010.


ILO
International
Labour
Office
Geneva
GO FOR THE GOAL :
END CHILD LABOUR
12 JUNE 2010
WORLD DAY AGAINST
CHILD LABOUR
DECENT WORK

**ಗೌರವ ಸಂಪಾದಕರು**
ಶ್ರೀ ಎಂ.ಎಸ್.ರವಿಶಂಕರ್
ಕಾರ್ಮಿಕ ಆಯುಕ್ತರು,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

**ಮುಖ್ಯ ಸಂಪಾದಕರು**
ಶ್ರೀ ಬಸವರಾಜು .ಆರ್
ಉಪ ಸಂಯೋಜಕರು,
ಬಾಲ ಕಾರ್ಮಿಕ ಸಂಪನ್ಮೂಲ ಕೇಂದ್ರ,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

**ಸಂಪಾದಕರು**
ಶ್ರೀ ಬಿ.ವಿ. ಕಿಶೋರ್ ಕುಮಾರ್
ಬಾಲ ಕಾರ್ಮಿಕ ಸಂಪನ್ಮೂಲ ಕೇಂದ್ರ,
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

## ಸಂಪಾದಕೀಯ ಸಲಹಾ ಸಮಿತಿ ಸದಸ್ಯರು

**ಜಂಟಿ ಕಾರ್ಮಿಕ ಆಯುಕ್ತರು,**
ಕಾರ್ಮಿಕ ಇಲಾಖೆ, ಬೆಂಗಳೂರು.

**ಶ್ರೀ ವಾಸುದೇವ ಶರ್ಮಾ**
ಚೈಲ್ಡ್ಸ್ ರೈಟ್ಸ್ ಟ್ರಸ್ಟ್, ಬೆಂಗಳೂರು.

**ಡಾ. ಅಶೋಕ್ ಕುಮಾರ್**
ಪ್ರೊ. & ಚೇರ್‌ಮನ್,
ಸುದ್ದಿ ಮಾಧ್ಯಮ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಶ್ರೀಮತಿ ಬಾಗೇಶ್ರೀ**
ಪತ್ರಕರ್ತರು, ದಿ ಹಿಂದೂ,
ಬೆಂಗಳೂರು.

**ಶ್ರೀ ಕಾರ್ತಿಕ್ ಶೇಖರ್**
ಮುಖ್ಯ ಕಾರ್ಯದರ್ಶಿ,
ಯುನೈಟ್ಸ್ ಪ್ರೊ, ಬೆಂಗಳೂರು.

**ಡಾ. ಮಹೇಂದ್ರ .ಆರ್**
ಸಲ್ಯೂಷನ್ ಎಕ್ಸ್‌ಚೇಂಜ್ – ಕರ್ನಾಟಕ
ಸಮುದಾಯ, ಬೆಂಗಳೂರು.

**ಶ್ರೀಮತಿ ಪಂಕಜ .ಎನ್**
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,
ಬೆಂಗಳೂರು.

**ಶ್ರೀಮತಿ ಬಾಲಸರಸ್ವತಿ,**
ಸಹ ನಿರ್ದೇಶಕರು,
ಸರ್ವ ಶಿಕ್ಷ ಅಭಿಯಾನ, ಬೆಂಗಳೂರು.

**ಶ್ರೀ ಪ್ರತಾಪ್ ಸಿಂಹ,**
ಪತ್ರಕರ್ತರು, ವಿಜಯ ಕರ್ನಾಟಕ,
ಬೆಂಗಳೂರು.

**ಶ್ರೀ ರಾಘವೇಂದ್ರ ಭಟ್**
ಸಂಯೋಜಕರು, ಯುನಿಸೆಫ್–ಮಕ್ಕಳ ರಕ್ಷಣಾ
ಯೋಜನೆ,
ರಾಯಚೂರು.

# ಪುಸ್ತಕ ವಿಮರ್ಶೆ

### 'ರೋಪ್ಸ್ ಇನ್ ದೇರ್ ಹ್ಯಾಂಡ್ಸ್.... ವೀವರ್ಸ್ ಆಫ್ ಚೈಲ್ಡ್‌ಹುಡ್',

ನವ ದೆಹಲಿಯಲ್ಲಿರುವ **'ಬಚಪನ್ ಬಚಾವ್ ಆಂದೋಲನ'ದ** ವತಿಯಿಂದ 'ನೇಪಾಳ'ದ ಸರ್ಕಸ್ ಕಂಪನಿಗಳಲ್ಲಿ ಶೋಷಣೆಗೊಳಗಾಗುತ್ತಿರುವ ಮಕ್ಕಳ ಆಧಾರಿತ ಚುಟುಕು ಚಲನಚಿತ್ರವನ್ನು ಸಿಡಿ ರೂಪದಲ್ಲಿ ತಯಾರಿಸಿದೆ. ಈ ಸಿಡಿ ದುಡ್ಡಿನ ಆಮಿಷವೊಡ್ಡಿ, ಮಕ್ಕಳು, ಅದರಲ್ಲೂ ಹೆಣ್ಣು ಮಕ್ಕಳನ್ನು ಸರ್ಕಸ್ ಕಂಪನಿಗಳಲ್ಲಿ ದುಡಿಸಿಕೊಂಡು ಶೋಷಣೆಗೆ ಒಳಪಡಿಸುತ್ತಿರುವ ತುಣುಕುಗಳನ್ನು ಸೇರಿಸಲಾಗಿದೆ.



**'ರೋಪ್ಸ್ ಇನ ದೇರ್ ಹ್ಯಾಂಡ್ಸ್.... ವೀವರ್ಸ್ ಆಫ್ ಚೈಲ್ಡ್‌ಹುಡ್', 'ಸ್ಪೀಕ್ ಯುವರ್ ಮೈಂಡ್,' 'ಚೈಲ್ಡ್‌ಹುಡ್ ನೌ',, 'ದಿ ನ್ಯೂ ಹೀರೋಸ್', ಹಾಗೂ 'ಟುವರ್ಡ್ಸ್ ಚೈಲ್ಡ್ ಫ್ರೆಂಡ್ಲಿ ವಿಲೇಜ್',** ಐದು ವಿವಿಧ ಚುಟುಕು ಚಲನಚಿತ್ರಗಳು ಈ ಸಿಡಿಯಲ್ಲಿವೆ. ಬಚಪನ್ ಬಚಾವ್ ಆಂದೋಲನದ ರೂವಾರಿ ಶ್ರೀ ಕೈಲಾಷ್ ಸತ್ಯಾರ್ಥಿ, ಮಕ್ಕಳನ್ನು ಸರ್ಕಸ್ ಕಂಪನಿಯೊಂದರಿಂದ ರಕ್ಷಿಸಿ ತರುತ್ತಿರುವ ತುಣುಕುಗಳನ್ನು ಚಿತ್ರಿಸಲಾಗಿದೆ.

### 'ದಿ ಸೌತ್ ಇಂಡಿಯಾ ಸೆಲ್ ಫಾರ್ ಹ್ಯೂಮನ್ ರೈಟ್ಸ್ ಎಜುಕೇಷನ್ ಅಂಡ್ ಮಾನಿಟರಿಂಗ್ (SICHREM)ನ

'ಮೇಕಿಂಗ್ ಹ್ಯೂಮನ್ ರೈಟ್ಸ್ ಎ ಹೌಸ್‌ಹೋಲ್ಡ್ ಕಾನ್ಸೆಪ್ಟ್' ಯೋಜನೆಯಡಿ 'ಬಾಲ ನ್ಯಾಯ' (ಪಾಲನೆ ಮತ್ತು ಸಂರಕ್ಷಣೆ) ಕಾಯ್ದೆ 2000, ಎಂಬ ಕಿರುಹೊತ್ತಿಗೆಯನ್ನು ತಂದಿದೆ. ಜ್ಯುವನೈಲ್ ಅಥವಾ ಬಾಲ ಅಂದರೆ ಯಾರು?, ಕಾನೂನಿನ ಜೊತೆ ಹೋರಾಡುತ್ತಿರುವ ಮಗು ಎಂದರೆ ಯಾರು?, ಪರಿವೀಕ್ಷಣಾಲಯ ಎಂದರೆ ಏನು?, ಬಾಲ ನ್ಯಾಯ ಮಂಡಳಿ ಎಂದರೆ ಏನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ಸರಳ ಭಾಷೆಯಲ್ಲಿ ವಿವರಿಸಲಾಗಿದೆ. ಒಂದೇ ಪುಸ್ತಕದಲ್ಲಿ ಆಂಗ್ಲ ಹಾಗೂ ಕನ್ನಡ ಭಾಷೆಗಳಲ್ಲಿ ಅನುವಾದವನ್ನು ಹೊಂದಿರುವ ಈ ಪುಸ್ತಕ, ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ಅತ್ಯಂತ ಉಪಯುಕ್ತ.




**ಬಾಲಕಾರ್ಮಿಕ ಸಂಪನ್ಮೂಲ ಕೇಂದ್ರ**

ನಮ್ಮ ಇ–ಜರ್ನಲ್‌ನ ಸದಸ್ಯತ್ವವನ್ನು ಕೇಂದ್ರದ ಅಧಿಕೃತ ವೆಬ್‌ಸೈಟ್ www.karunadu.gov.in/ karnatakachildlabour.com ಮೂಲಕ ಪಡೆದುಕೊಳ್ಳಬಹುದು.

'ಕಾರ್ಮಿಕ ಭವನ', ಕಾರ್ಮಿಕ ಇಲಾಖೆ,
ಐಟಿಐ ಕಾಂಪೌಂಡ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–29.
ದೂರವಾಣಿ: 080–22453549/
26531258 ಎಕ್ಸ್‌ಟೆನ್ಷನ್: 152
ಇ–ಮೇಲ್: editorsrc@yahoo.com,
ksrccl@yahoo.in